International Journal of Kannada Research 2017; 3(4): 24-32

International Journal of Kannada Research
www.kannadajournal.com

ISSN: 2454–5813
IJKR 2017; 3(4): 24-32
© 2017 IJKR
www.kannadajournal.com
Received: 08-08-2017
Accepted: 09-09-2017

**Dr. Buddappa Singe**
Associate Professor In Kannada
Govt Degree College
Yadgir, Karnataka, India

**Correspondence**
**Dr. Buddappa Singe**
Associate Professor In Kannada
Govt Degree College
Yadgir, Karnataka, India

# ಜನಪದ ಕಾವ್ಯಗಳ ಸ್ವರೂಪ ಮತ್ತು ಲಕ್ಷಣ

**Dr. Buddappa Singe**

ಭಾರತೀಯ ಬುಡಕಟ್ಟುಗಳಲ್ಲಿ 'ಮಾನಸಿಕ ಪಠ್ಯ'ವಾಗಿ ಉಳಿದುಬಂದಿರುವ ಅನೇಕ ಜನಪದ ಕಾವ್ಯಗಳು ನಮ್ಮ ವಿದ್ವಾಂಸರ ಗಮನಕ್ಕೆ ಬರದೇ ಹಾಗೆ ಉಳಿದಿವೆ. ಸಮಷ್ಟಿ ಪ್ರಜ್ಞೆಯಲ್ಲಿ ರೂಪುಗೊಂಡು 'ಮಾನಸಿಕ ಪಠ್ಯ'ವಾಗಿ ಹರಿದುಬಂದ ಈ ಜನಪದ ಕಾವ್ಯಗಳು ತಲೆ ತಲಾಂತರಗಳಿಂದ ಪ್ರಸರಣ ಹೊಂದುತ್ತಾ ಬರವಣಿಗೆ ಕಾಣದೆ ಬದುಕಿವೆ. ಅಷ್ಟೇ ಅಲ್ಲ, ಇವತ್ತಿಗೂ ಕೂಡ ಸಂಶೋಧಕರ, ಸಂಪಾದಕರ, ಸಂಗ್ರಹಕಾರರ, ವಿಮರ್ಶಕರ ಗಮನಕ್ಕೆ ಬಾರದೆ, ಮಾನದಂಡಕ್ಕೆ ಸಿಗದೆ ಉಳಿದುಕೊಂಡಿವೆ.

ನಮ್ಮಲ್ಲಿ ಅನೇಕ ಬಗೆಯ ಜನಪದ ಕಾವ್ಯಗಳಿದ್ದರೂ ಅವುಗಳ ಶಾಸ್ತ್ರೀಯವಾದ ಅಧ್ಯಯನ ಪ್ರಾರಂಭವಾದದ್ದು ಪಾಶ್ಚಿಮಾತ್ಯರಿಂದಲೇ ಬುಡಕಟ್ಟು ಜನಾಂಗದಲ್ಲಿ ಮೌನವಾಗಿ ಉಸಿರಾಡುತ್ತಿದ್ದ ಜನಪದ ಕಾವ್ಯಗಳು ನಿಚ್ಚಳವಾಗಿ ಉಸಿರಾಡಲು ಆರಂಭಿಸಿದ್ದು ಇತ್ತೀಚಿನ ದಿನಮಾನಗಳಲ್ಲಿ

ಜಾನಪದದ ಒಂದು ಅಂಗವಾಗಿ ಬೆಳೆದ ಜನಪದ ಗೀತೆ, ಕಥನ ಗೀತೆ, ಲಾವಣಿ, ಹಾಗೂ ಕಾವ್ಯ ಒಂದೇ ನಿಲುವನ್ನು ಪಡೆದವುಗಳು. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಆಯಾ ಜನಾಂಗದ ಬದುಕನ್ನೇ ಬಿಚ್ಚಿಡುತ್ತಾ ಸಾಂಸ್ಕೃತಿಕವಾಗಿ, ವಿಶಿಷ್ಟವಾದ ಜನಪದ ಇತಿಹಾಸವನ್ನು ಸೃಷ್ಟಿಸಿಬಿಡುವ ಅದರ ಪರಿ ಕುತೂಹಲಕರವಾದದ್ದು.

ಜನಪದ ಕಾವ್ಯ ಮತ್ತು ಈ ಬಗೆಯ ಇತರ ರೂಪಗಳು ಬಹಳಷ್ಟು ಮೌಖಿಕ ಪರಂಪರೆಯನ್ನೇ ಆಧರಿಸಿಕೊಂಡವುಗಳಾಗಿವೆ. ಅನೇಕ ರೀತಿಯ ಗೊತ್ತು ಗುರಿಗಳ ಜೊತೆಗೆ ಆಶಯ ವರ್ಗಗಳನ್ನು ಸೃಷ್ಟಿಸಿಕೊಳ್ಳುತ್ತವೆ. ಅನೇಕ ಜನಪದ ಕಾವ್ಯಗಳು ಶಿಷ್ಟ ಪರಂಪರೆಯ ರಾಮಾಯಣ, ಮಹಾಭಾರತ ಮುಂತಾದವುಗಳಿಂದ ವಸ್ತು(ಪಠ್ಯ)ವನ್ನು ಸ್ವೀಕರಿಸಿ, ಯೋಗ್ಯವಾದ ಸಂದರ್ಭವನ್ನು ಆಯ್ಕೆ ಮಾಡಿಕೊಂಡು ರಚಿತವಾದವುಗಳಾಗಿವೆ. "ಭಾರತೀಯ ಸಂಸ್ಕೃತಿಯ ಮೇಲೆ ಪುರಾಣಗಳು ಬೀರಿರುವ ಪ್ರಭಾವ ದೊಡ್ಡದು. ಶಿಷ್ಟ ಸಂಸ್ಕೃತಿಯ ಪ್ರತೀಕವಾದ ಮಹಾಭಾರತ, ರಾಮಾಯಣ ಕಾವ್ಯಗಳು ಹಾಗೂ ಶೈವ–ವೈಷ್ಣವ ಪುರಾಣಗಳು ಶಿಷ್ಟತೆಯ ಅಂಶಗಳನ್ನು ಹೆಚ್ಚಾಗಿ ಒಳಗೊಂಡು ಬಂದಿದ್ದರೂ ಅವುಗಳಲ್ಲಿ ನಮಗೆ ಜನಪದ ಧೋರಣೆಗಳು ಕಾಣಿಸದೇ ಇಲ್ಲ. ಹಿಂದೂ ಜನಾಂಗದವರ ಪರಸ್ಪರ ಸಂಘರ್ಷಗಳನ್ನು ಇವು ಕೆಲವೊಮ್ಮೆ ಧ್ವನಿಸುತ್ತಿದ್ದರೂ ಅನಂತರದಲ್ಲಿ ಬೆಳವಣಿಗೆಯಾದ ಸಂಸ್ಕೃತಿಯಲ್ಲಿ ಕಾವ್ಯ, ಪುರಾಣಗಳು ಎಲ್ಲ ಮತದವರಿಗೂ ಸಾಮಾನ್ಯವೆನಿಸಿವೆ. ಇದರಲ್ಲಿ ಹೆಚ್ಚಾಗಿ ಜನಾಂಗದ ಆದರ್ಶೀಕರಣ ಹಾಗೂ ನೈತಿಕ ಮೌಲ್ಯಗಳ ಸ್ಥಾಪನೆಗೆ ಮಹತ್ವ ಬಂದಿದೆ. ಅದರಿಂದ ಭಾರತೀಯರ ಜೀವನ ದೃಷ್ಟಿಯಲ್ಲಿ ಇವು ಮೌಲಿಕ ಕೃತಿಗಳಾಗಿ ಕಾಣಿಸಿವೆ"[1] ಎನ್ನುವ ಮಾತು ರಾಮಾಯಣ, ಮಹಾಭಾರತ, ಪುರಾಣ ಕಾವ್ಯಗಳ ಮೇಲೆ ಬೆಳಕು ಚಲ್ಲುವಂತಿದೆ. ಆ ಕಾವ್ಯಗಳ ನೈತಿಕ ಮೌಲ್ಯಗಳನ್ನು ಆಧರಿಸಿಕೊಂಡು ಸಂದರ್ಭ ಸನ್ನಿವೇಶಗಳಿಗೆ ಅನುಗುಣವಾಗಿ ಜನಪದರೂ ಕಾವ್ಯಗಳನ್ನುಕಟ್ಟಿ ಹಾಡಿದ್ದಾರೆ. ಇಲ್ಲಿ ಜನಪದರ ಮೇಲೆ ಕಾಲಾಂತರದಲ್ಲಿ ಶಿಷ್ಟ ಸಂಸ್ಕೃತಿಯ ಪ್ರಭಾವ ಆದದ್ದನ್ನು ಗುರುತಿಸಬಹುದು.

ಜನಪದ ಸಂಪ್ರದಾಯಗಳಲ್ಲಿನ ಶಿಷ್ಟ ಕವಿಗಳಂತೆ ಜನಪದ ಗಾಯಕರೂ ಅಷ್ಟೇ ಮುಖ್ಯ. ಚೌಡಿಕೆಯವರು, ನೀಲಗಾರರು, ದೇವರಗುಡ್ಡರು, ಗೊಂದಲಿಗರು, ಗೊರವರು, ಗೆಣೆಯವರು, ತಂಬೂರಿಯವರು, ಕರಪಾಲದವರು, ಹಾಲುಮತ ಹಾಡುಗಾರರು, ಹರದೇಶಿ–ನಾಗೇಶಿ ಇತರ ಗಂಡು–ಹೆಣ್ಣುಗಳಲ್ಲಿ ಜನಪದ ಕಾವ್ಯಗಳು ಮೌಖಿಕ ಪರಂಪರೆಯಲ್ಲಿ ಬದುಕಿಕೊಂಡಿವೆ. ಸಾಂಸ್ಕೃತಿಕ ಬದುಕಿನ ಚಿತ್ರಣದ ಜೊತೆಗೆ ನಾಯಕ ನಾಯಕಿಯರ ಜೀವನ ಹೋರಾಟ ಸಂಘರ್ಷಗಳನ್ನಲ್ಲದೇ ಅನೇಕ ಅಲೌಕಿಕ ಘಟನೆಗಳ ನಿರೂಪಣೆಯನ್ನು ಜನಪದ ಕಾವ್ಯಗಳು ಪಡೆದಿರುತ್ತವೆ. ಜಿ.ಶಂ.ಪ ಹೇಳುವಂತೆ ಕತೆಗಳು ವೇಗವಾಗಿ ಹರಿಯುವುದಿಲ್ಲ. ಅಲ್ಲಲ್ಲಿ ವರ್ಣನೆಗಳು ಸಹಜವಾಗಿ ಕಾಣುತ್ತವೆ. ಕಾವ್ಯಗಳಲ್ಲಿ ಕಥಾನಾಯಕನಿರಬೇಕು, ವೀರ ಕಾವ್ಯವಾಗಿರಬೇಕು, ಧರ್ಮದ ಗುರಿಯೊಂದಿಗೆ ರಾಷ್ಟ್ರೀಯ ಮೌಲ್ಯ

ಹೊಂದಿರಬೇಕು. ಅಷ್ಟೇ ಅಲ್ಲ, ಅದು ಇಡೀ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿರಬೇಕು. ಧರ್ಮ ಸಂಸ್ಕೃತಿಯಲ್ಲಿ ಅಪಾರ ಗೌರವವಿಟ್ಟುಕೊಂಡು ಬಂದ ಭಾರತೀಯರಿಗೆ ಇಂಥ ಕಾವ್ಯಗಳಲ್ಲಿ ಅಪಾರ ಭಯ ಭಕ್ತಿ ಇದೆ.

ಜನಪದ ಕಾವ್ಯ ಲಕ್ಷಣದ ಬಗ್ಗೆ ವಿವೇಚಿಸುತ್ತಾ ಪಾಶ್ಚಾತ್ಯ ವಿದ್ವಾಂಸ Felix.J. Oinax (ಫೆಲಿಕ್ಸ್ ಜೆ ಒಯನಿಸ್) ಅವರು ಹೇಳಿದ್ದನ್ನೂ ಇಲ್ಲಿ ಸ್ಮರಿಸಬಹುದು. "Folk (Oral) epic songs are narrative. Poems in formulaic and ornamental style dealing with the adventures of extra – ordinary people" ಜನಪದ (ವಾಚಿಕ) ಮಹಾಕಾವ್ಯಗಳು ಅಲಂಕಾರಿಕ ಮತ್ತು ಸೂತ್ರಾತ್ಮಕ ರೀತಿ (ಶೈಲಿ)ಯಲ್ಲಿರುವ, ಅಸಾಧಾರಣ ವ್ಯಕ್ತಿಗಳ ಸಾಹಸಗಳನ್ನು ಕುರಿತ ಕವನಗಳು ಸಾಹಸ ವೀರನೊಬ್ಬನು ತನ್ನ ಸಮೂಹ ರಕ್ಷಿಸಿಕೊಳ್ಳಲು ವೈರಿಗಳೊಡನೆ ಹೋರಾಡಿ ಜೀವ ತ್ಯಾಗ ಮಾಡುತ್ತಾನೆ. ಇಂತಹ ಅಂಶಗಳನ್ನಿಟ್ಟುಕೊಂಡು ಜನಪದ ಕಾವ್ಯಗಳು ನಿರ್ಮಾಣವಾಗುತ್ತವೆ. ಈ ಕಾವ್ಯಗಳು ಸಾವಕಾ ಶವಾಗಿ ಪ್ರಾರಂಭವಾಗಿ ನಿಧಾನಗತಿಯಲ್ಲಿ ಸಾಗಿ, ಪೂರ್ಣಗೊಳ್ಳುತ್ತವೆ. ಮತ್ತೆ ಮತ್ತೆ ಬರುವ ಪುನರಾವರ್ತನೆಗಳು ಇಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ. ಇಡೀ ಕಾವ್ಯದ ತುಂಬೆಲ್ಲ ಒಂದು–ಎರಡು ಪಾತ್ರಗಳು ಕ್ರಿಯೆಗೆ ಒಳಗೊಂಡಿರುವದು ಕಂಡು ಬರುತ್ತದೆ. ದುಷ್ಟರ ಸಂಹಾರ ಶಿಷ್ಟರ ರಕ್ಷಣೆ, ನಾಯಕ– ಪ್ರತಿ ನಾಯಕರಲ್ಲಿ ಎದ್ದು ಕಾಣುತ್ತದೆ. ಅಸಮರ್ಥರಿರುವವರು ಸಮರ್ಥರಾಗಿ, ಉತ್ತಮರಾಗಿ, ಗೋಚರಿಸುವ ಸಾಧ್ಯತೆಗಳಿರುತ್ತವೆ. ಮೂಲ ಕಥೆಗೆ ಸಂಬಂಧಿಸಿದ ವಸ್ತು ಇಟ್ಟುಕೊಂಡು ಜೀವನದ ವಿವರಗಳು

ನಿರೂಪಿತಗೊಳ್ಳುತ್ತವೆ. ಹಾಡುಗಾರರು ಸಂದರ್ಭಕ್ಕೆ ತಕ್ಕಂತೆ ಒಂದೇ ಕಥೆಯನ್ನು ಹಾಡುತ್ತಾರೆ. ಈ ಕಥೆಗಳು ವೃತ್ತಿ ಗಾಯಕರ ಸ್ವತ್ತಾಗಿರುತ್ತವೆ. ತಮ್ಮ ಸುತ್ತ ಮುತ್ತಲಿನ, ಸ್ಥಳೀಯ ದೇವಾಲಯದ ವೀರರ ಕಥೆಯನ್ನು ಹಾಡಿ ಆರಾಧಿಸುತ್ತಾರೆ. ಜಿ. ಶಂ. ಪ. ಅವರು ತಮ್ಮ "ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು" ಎಂಬ ಮಹಾಪ್ರಬಂಧದಲ್ಲಿ ಮಹಾಕಾವ್ಯ ಪರಂಪರೆಯ ಲಕ್ಷಣಗಳನ್ನು ಈ ರೀತಿ ಸಂಗ್ರಹಿಸಿಕೊಡುತ್ತಾರೆ.

1. ತಮ್ಮ ಅಧಿದೈವಕ್ಕೆ ಸಂಬಂಧಿಸಿದ ಜನಪದ ಕಾವ್ಯವೊಂದನ್ನು ಪರಂಪರಾನುಗತವಾಗಿ ಕಾಪಾಡಿಕೊಂಡು ಬಂದ, ಹಾಡಿಕೊಂಡು ಬಂದ ವಿಶಿಷ್ಟ ಗಾಯಕರ ವರ್ಗವೊಂದು ಇರುತ್ತದೆ.
2. ದೈವದ ಸಂಕೇತವಾದ ಜನಪದ ಕಾವ್ಯಗಳನ್ನು ಬಳಸಿ ಮೇಳಗಳೋಪಾದಿಯಲ್ಲಿ ಆ ಕಾವ್ಯಗಳನ್ನು ಹಾಡಲಾಗುತ್ತದೆ. ಆ ವಾದ್ಯಗಳನ್ನು ಉಳಿದ ಸಂದರ್ಭದಲ್ಲಿ ದೇವರ ಗದ್ದುಗೆಯ ಮೇಲೆ ಇಟ್ಟು ಪೂಜಿಸಲಾಗುತ್ತದೆ.
3. ದೇವರ ಲಾಂಛನಗಳನ್ನು ಧರಿಸಿ ವಿಶೇಷ ಮತಾಚರಣೆಯ ಸಂದರ್ಭದಲ್ಲಿ ಅಥವಾ ಪೂಜಾ ಸಂದರ್ಭದಲ್ಲಿ, ಹಬ್ಬ ಹರಿದಿನಗಳಲ್ಲಿ, ಯಾತ್ರೆ, ಜಾತ್ರೆಗಳಲ್ಲಿ ಮಾತ್ರ ಹಾಡಬಹುದಾದ ಕಾವ್ಯಗಳಾಗಿರುತ್ತವೆ.
4. ಕೊನೆಯ ಪಕ್ಷ ಒಂದು ರಾತ್ರಿಯಾದರೂ ಹಾಡುವಷ್ಟು ವ್ಯಾಪಕತೆ ಆ ಕಾವ್ಯಗಳಿಗಿರುತ್ತದೆ. ಹತ್ತು ಹಲವು ರಾತ್ರಿ ಹಾಡುವಷ್ಟು ವಿಸ್ತಾರವಾಗಿಯೂ ಇರಬಹುದು.
5. ಸಾಮಾನ್ಯವಾಗಿ ಅಧಿದೈವ ಕಥಾ ನಾಯಕನಾಗಿ ಅಥವಾ ಮುಖ್ಯ ಪಾತ್ರವಾಗಿ ಕಾಣಿಸಿಕೊಳ್ಳಬಹುದು. ಇಲ್ಲವೆ, ಆ ದೈವದ ದಳಪತಿ, ಶಿಷ್ಯ, ಹಿಂಬಾಲಕ, ಆಸ್ಥಾನದಲ್ಲಿ ಸ್ಥಾಪಿತವಾಗಬಹುದು.
6. ಕಥೆ ಎಲ್ಲಿಂದಲೋ ಆರಂಭವಾಗಿ ಸಂಬಂಧಪಟ್ಟ ಪುಣ್ಯ ಕ್ಷೇತ್ರದಲ್ಲಿ ಐಕ್ಯಗೊಳ್ಳಬಹುದು. ಇಲ್ಲವೇ ಅಲ್ಲಿಂದಲೇ ಆರಂಭವಾಗಿ ಹತ್ತು ದಿಕ್ಕಿನಲ್ಲಿ, ಹತ್ತು ಪ್ರದೇಶಗಳಲ್ಲಿ ನಡೆದಾಡಬಹುದು.
7. ಒಕ್ಕಲು ಮಾಡಿಕೊಳ್ಳುವ ಭಕ್ತರನ್ನು ಶಿಷ್ಯರನ್ನು ಪಡೆಯುವ ಉದ್ದೇಶದಲ್ಲಿ ಕಥಾನಾಯಕ ತನ್ನ ಮಹಿಮೆಗಳನ್ನು ಮೆರೆಯಬಹುದು. ಇಲ್ಲವೇ ದುಷ್ಟರ ಶಿಕ್ಷಣ ಶಿಷ್ಟರ ರಕ್ಷಣೆಯ ಉದ್ದೇಶವನ್ನು ಹೊಂದಿರಬಹುದು.
8. ಶುದ್ಧ ಪದ್ಯ ರೂಪದಲ್ಲಿ, ಇಲ್ಲವೇ ಗದ್ಯ ಪದ್ಯ ಮಿಶ್ರಿತ ರೀತಿಯಲ್ಲಿ ಕಾವ್ಯ ಇರಬಹುದು. ಬರಿಯ ಗದ್ಯದಲ್ಲೇ ಇರುವ ಕಥೆ ಈ ಕಾವ್ಯದ ವ್ಯಾಪ್ತಿಗೆ ಬರಲಾರದು ವಾದ್ಯವನ್ನು ಬಳಸಿಕೊಂಡು ಹಾಡಬೇಕಾದುದರಿಂದ ಅನಿವಾರ್ಯವಾಗಿ 'ಹಿಮ್ಮೇಳ–ಮುಮ್ಮೇಳ'ಗಳು ಇದ್ದೇ ಇರುತ್ತವೆ.
9. ಯಾವ ದೈವದ ಕಥೆಯನ್ನು ಹಾಡುತ್ತಾರೋ ಅಂಥವರಿಗೆ ಆ ದೈವದ ಹೆಸರಿನಲ್ಲಿ 'ದೀಕ್ಷೆ' ಆಗಿರಬೇಕು. ದೀಕ್ಷೆಯನ್ನು ನೀಡುವವನು ಹಿರಿಯ ಗುಡ್ಡನಾಗಿರಬಹುದು, ಇಲ್ಲವೇ ಕ್ಷೇತ್ರಕ್ಕೆ ಸಂಬಂಧಿಸಿದ ಶ್ರೀ ಮಠವೊಂದರಲ್ಲಿನ ಗುರುವೊಬ್ಬನಿಂದ ದೀಕ್ಷೆ ಪಡೆಯಬಹುದು.
10. ಕಥಾನಾಯಕ 'ದೈವ' ದ ವ್ಯಾಪ್ತಿಗೆ ಏರಿದ ಒಬ್ಬ ಮಹಾ ಪುರುಷನಾಗಿರಬಹುದು. ಅನಿರೀಕ್ಷಿತವಾಗಿ ಉದ್ಭವವಾದ ಶಕ್ತಿ ವಿಶೇಷವಾಗಿರಬಹುದು.
11. ಕಥೆಗೆ ಸಂಬಂಧಿಸಿದ, ನಾಯಕನಿಗೆ ಸಂಬಂಧಿಸಿದ ಅವಶೇಷಗಳು ಅವುಗಳ ಐತಿಹ್ಯಗಳೂ ನಿರ್ದಿಷ್ಟ ಸ್ಥಳಗಳಲ್ಲಿ ದೊರೆಯಬೇಕು.
12. ಹಿಂದೊಮ್ಮೆ ನಿಜವಾಗಿ ನಡೆದ ಕಥೆಯೇ ಎಂಬಂತೆ ಅದು ನಿರೂಪಿತವಾಗಿರಬೇಕು.

ಹೀಗೆ ಜಿ.ಶಂ.ಪ ಅವರು ತಮ್ಮ ದೀರ್ಘವಾದ ಅಧ್ಯಯನದಿಂದ ಮಹಾಕಾವ್ಯ ಪರಂಪರೆಯ ಲಕ್ಷಣ ಹಾಗೂ ಸ್ವರೂಪವನ್ನು ಸಮರ್ಪಕವಾಗಿ ತಿಳಿಸಿದ್ದಾರೆ.3

ವ್ಯಾಪಕವಾದ ವಸ್ತು, ಗಾತ್ರ, ಘಟನೆಗಳಿಂದ ಕೂಡಿದ ವಿಸ್ತಾರವಾದ ಕಥೆ ಹಾಗೂ ಸಮಗ್ರವಾದ ಆಳ ಅಗಲಗಳ ರಚನೆಯೇ ಜನಪದ ಮಹಾಕಾವ್ಯ ಎನಿಸಿಕೊಳ್ಳುತ್ತದೆ. ಅದು ಇಡಿಯಾದ ಒಂದು ಪ್ರದೇಶದ ಆಸೆ–ಆಕಾಂಕ್ಷೆಗಳನ್ನು ಅಭಿವ್ಯಕ್ತಿಗೊಳಿಸುವ ಸಾಧನವೆಂದು ಹೇಳಬಹುದು. ತಲೆ ತಲಾಂತರಗಳಿಂದ ಬಂದ ಪರಂಪರೆಯನ್ನು ಅವು ಯಾವ ಕಾಲಕ್ಕೂ ಪ್ರಸ್ತುತವಾಗಿಯೇ ಉಳಿಸಿಕೊಂಡು ಬಂದಿರುತ್ತವೆ. ಹರಿದು ಹಂಚಿ ಹೋಗಿರುವ ಕುಮಾರರಾಮನ ಕಥೆಯನ್ನು ಕುರಿತು "ಸಮಗ್ರ ಕರ್ನಾಟಕದಲ್ಲಿ ಕುಮಾರ ರಾಮನ ಕಥೆಯ ಶೋಧ ನಡೆದು ಚದುರಿ ಹೋಗಿರುವ ಬೇರೆ ಬೇರೆ ಭಾಗಗಳನ್ನು ಫಿನ್‌ಲೆಂಡಿನ ಕಲೇವಾಲ ಜನಪದ ಮಹಾಕಾವ್ಯದ ಮಾದರಿಯಲ್ಲಿ ಕೂಡಿಸಲು ಮೂಲ ಕಥೆಯನ್ನು ಪುನರ್‌ರಚಿಸಲು ಇನ್ನೂ ಸಾಧ್ಯತೆಯಿದೆ."[4] ಎಂಬ ಸಮಾಧಾನವನ್ನು ಜಿ.ಶಂ.ಪ ವ್ಯಕ್ತಪಡಿಸಿದ್ದಾರೆ. ಕುಮಾರ ರಾಮನ ಕಾವ್ಯ ಜನಪದ ಮಹಾಕಾವ್ಯದ ಸಾಲಿಗೆ ಸೇರುವ ಸಾಧ್ಯತೆ ಇದೆ. ಅದರಲ್ಲಿಯ ಎಲ್ಲ ಲಕ್ಷಣಗಳು ಜನಪದ ಕಾವ್ಯ ಪರಂಪರೆಗೆ ಒಗ್ಗುವಂತಿದೆ. ಇಡಿಯಾಗಿ ಜನಪದ ಪ್ರಕಾರಗಳನ್ನು ನೋಡಿದರೆ ಪದ್ಯ ಪ್ರಕಾರಗಳಲ್ಲಿಯೇ ಜನಪದ ಕಾವ್ಯಗಳು ವಿಶೇಷ ಲಕ್ಷಣಗಳನ್ನು ಪಡೆದಿವೆ ಎಂದು ಹೇಳಬಹುದು.

**1. ಜನಪದ ಕಾವ್ಯ ಸೃಷ್ಟಿ:**

ಕನ್ನಡ ಸಾಹಿತ್ಯವನ್ನು ಸಿಂಹಾವಲೋಕನ ಮಾಡಿದಾಗ ಪಂಪನಿಂದ ಹಿಡಿದು ಕುವೆಂಪುವರೆಗೆ ಒಂದಿಲ್ಲ ಒಂದು ರೀತಿಯಿಂದ ಮಾರ್ಗ, ದೇಶೀ ಕಾವ್ಯಗಳು ರೂಢಿಯಲ್ಲಿದ್ದುದು ತಿಳಿದುಬರುತ್ತದೆ. ಪಂಡಿತರು ಮೆಚ್ಚಿಕೊಂಡದ್ದು ಮಾರ್ಗ ಸಾಹಿತ್ಯ; ಜನ ಸಾಮಾನ್ಯರ ಸ್ವತ್ತಾಗಿರುವುದು ದೇಶೀ ಸಾಹಿತ್ಯ ಯಾವುದೇ ಭಾಷೆಯ ಸಾಹಿತ್ಯ

ಗಮನಿಸಿದರೂ ಮೊದಲು ಜನ್ಮ ಪಡೆದದ್ದು ದೇಶೀ ಸಾಹಿತ್ಯ. ಅನಂತರ ದೇಶೀಯನ್ನೂ ಆಧರಿಸಿ ವಿಶಿಷ್ಟ ರೀತಿಯಲ್ಲಿ ನಿರ್ಮಾಣಗೊಂಡದ್ದು ಮಾರ್ಗ ಸಾಹಿತ್ಯ. ದೇಶೀಯ ವಸ್ತು, ಧಾಟಿ, ರೀತಿ, ನೀತಿ, ಶಿಷ್ಟ ಪರಂಪರೆಗೆ ಹರಿದು ಬರುವಾಗ ಶಾಸ್ತ್ರದ ಕಟ್ಟಿಗೆ ಒಳಗೊಂಡು ಹೊಸ ಹೊಳಹು ಪಡೆಯುತ್ತದೆ. ಹೀಗೆ ಕನ್ನಡ ಜನಪದ ಕಾವ್ಯ ಕಾಲಕ್ರಮದಲ್ಲಿ ಶಿಷ್ಟ ಸಾಹಿತ್ಯದ ಘಟ್ಟ ಪಡೆಯುತ್ತದೆ. ತ್ರಿಪದಿ, ಸಾಂಗತ್ಯ, ಷಟ್ಪದಿ ಮೊದಲಾದ ಜನಪದ ಮಟ್ಟಗಳು ಕಾಲಾಂತರದಲ್ಲಿ ಶಿಷ್ಟ ಸಾಹಿತ್ಯಕ್ಕೆ ಬಳಕೆಗೊಂಡಿವೆ. ಹೀಗೆ ಬೆಳೆದು ಬಂದ ಹಲವಾರು ಕಾವ್ಯ ಪ್ರಕಾರಗಳು ಕನ್ನಡದಲ್ಲಿದ್ದುದ್ದನ್ನು ಶ್ರೀವಿಜಯ ತನ್ನ ಕಾವ್ಯದಲ್ಲಿ

> ನುಡಿಗೆಲ್ಲಂ ಸಲ್ಲದ ಕ
> ನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ
> ಗಡಿನ ನೆಗಟ್ಟೆಯ ಕಬ್ಬದೊ
> ಳೊಂಡಂಬಡಂ ಮಾಡಿದರ್ ಪುರಾತನ ಕವಿಗಳ್[5]
> ಹೀಗೆ ಬೆದಂಡೆ ಚತ್ತಣ ಕಾವ್ಯ ಜಾತಿಗಳು ಮೊದಲು ಜನಪದ ಕಾವ್ಯಗಳಾಗಿದ್ದು ನಂತರ ಶಾಸ್ತ್ರಕ್ಕೆ ತಿರುಗಿದವು.

ಜಾನಪದ ಕಾವ್ಯ ಎಂದಕೂಡಲೇ ನಮ್ಮ ನೆನಪಿಗೆ ಬರುವುದು ರಾಮಾಯಣ, ಮಹಾಭಾರತದಂತಹ ಶಿಷ್ಟ ಕಾವ್ಯಗಳು. ಅವು ಇಡಿಯಾಗಿ ನಮ್ಮ ಜನಪದ ಬದುಕನ್ನು ಆವರಿಸಿವೆ. ಶಿಷ್ಟ ಕಾವ್ಯ ವ್ಯಕ್ತಿನಿಷ್ಟವಾದರೆ, ಜನಪದ ಕಾವ್ಯ ಸಮಷ್ಟಿ ನಿಷ್ಟವಾದುದು. ಅಂತೆಯೇ ಶಿಷ್ಟ ಕಾವ್ಯಗಳಿಗಿಂತ ಜನಪದ ಕಾವ್ಯಗಳು ಜನ ಸಾಮಾನ್ಯರಿಗೆ ಬಹು ಹತ್ತಿರವಾದವು. ಸರಳ, ಸುಲಭವಾಗಿರುವದು ಜನಪದ ಕಾವ್ಯದ ವಿಶಿಷ್ಟ ಗುಣ. ನಮ್ಮ ಪ್ರಾಚೀನ ಕವಿಗಳೂ ಕೂಡ ತಮ್ಮ ಕಾವ್ಯಗಳಲ್ಲಿ ಮಾರ್ಗ ದೇಶಿ ಅಳವಡಿಸಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಆದಿಕವಿ ಪಂಪ ದೇಶೀಮಾರ್ಗ ಕುರಿತು "ಬಗೆ ಪೊಸತಪ್ಪುದಾಗಿ ಮೃದು ಬಂಧದೊಳೊಂದುವುದು ಒಂದಿ ದೇಶಿಯೊಳ್ ಪುಗುವುದು ಪೊಕ್ಕು ಮಾರ್ಗದೋಳ್ ತಳ್ವದು, ತಳ್ತೊಡೆ ಕಾವ್ಯ ಬಂಧಮೊಪ್ಪುಗುಂ" ಎಂದು ಜಾನಪದೀಯ ಅಂಶಗಳ ಸೊಗಸನ್ನು ಪ್ರಶಂಸಿದ್ದಾನೆ.

ವಿಸ್ತಾರದಲ್ಲಿ ಬೃಹತ್ತಾದ ಮೌಖಿಕ ಕಾವ್ಯಗಳು, ಸಾಮಾನ್ಯವಾಗಿ, ಸಾಂಸ್ಕೃತಿಕ ವೀರರ ಸಾಹಸ ಗಳನ್ನು ಕುರಿತಿರುತ್ತವೆ. ದುಷ್ಟರೊಡನೆ ಹೋರಾಡಿ ಆತ ಪ್ರಾಣ ತ್ಯಾಗ ಮಾಡಿರುತ್ತಾನೆ. ವೀರನ ಮರಣದ ತರುವಾಯ ಆತನ ಅನುಯಾಯಿಗಳು ದೇವರೆಂದು ಪೂಜಿಸುವ ನಂಬಿಕೆ ಇಲ್ಲಿ ಕಂಡು ಬರುತ್ತದೆ. ಈ ದೇವತೆಗಳಿಗೆ ಹೊಂದಿಕೊಂಡಂತೆ ಕಾವ್ಯಗಳು ಹುಟ್ಟು ಪಡೆಯುತ್ತವೆ. ನಂತರ ಜಾತ್ರೆ, ಉತ್ಸವ ಆಚರ ಣೆಗಳು ನಡೆಯುತ್ತವೆ. ಇಂತಹ ಸಂದರ್ಭಗಳಲ್ಲಿ ಕಾವ್ಯದ ಹಲವು ಭಾಗಗಳನ್ನು ಹಾಡಲಾಗುತ್ತದೆ. "ಒಬ್ಬ ವೀರನ ಸಾಹಸಮಯ ಗಾಥೆ ಜನಮನವನ್ನು ಮುಟ್ಟಿದಾಗ ಪುರಾಣವಾಗಿ ಮಾರ್ಪಟ್ಟು ಕಥನ ರೂಪದಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ಆಗ ವಸ್ತುನಿಷ್ಟ ಕಾವ್ಯವೊಂದು ರೂಪ ಪಡೆಯುತ್ತದೆ. ಈ ಕಾವ್ಯ ಕಂಠಸ್ಥಗೊಂಡು ಕಾಲಾಂತರದಲ್ಲಿ ಬದಲಾವಣೆಗಳನ್ನು ಪಡೆಯುತ್ತಾ ಹಿಗ್ಗುತ್ತಾ ತನ್ನ ಗಾತ್ರ, ಪಾತ್ರ, ಸೂತ್ರಗಳನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ."[6] ಈ ರೀತಿಯ ರಚನೆ ಪಡೆದ ಕಾವ್ಯ ವ್ಯಕ್ತಿಯದಾಗದೆ ಸರ್ವರ ಸ್ವತ್ತಾಗುತ್ತದೆ. ಶಿಷ್ಟ ಕಾವ್ಯಕ್ಕಿಂತಲೂ ಜನಪದ ಕಾವ್ಯ ಹೆಚ್ಚು ವ್ಯಾಪಕವಾದ ಜನಪದ ಸಮೂಹವನ್ನು ಪಡೆದುದಾಗಿದೆ. ಜನಪದ ಕಾವ್ಯ ಸಾವಯವ ಸಮಾಜದಲ್ಲಿ ಹುಟ್ಟಿ ಇಡೀ ತನ್ನ ಗ್ರಾಮೀಣ ಬದುಕಿನ ಸಿಹಿ ಕಹಿಯನ್ನು ತುಂಬಿದ ಒಂದು ಕುಟುಂಬವಾಗಿ ಬಾಳುತ್ತದೆ. ಸಾಮಾಜಿಕ, ಧಾರ್ಮಿಕ, ಆರ್ಥಿಕ ಸಂದರ್ಭಗಳನ್ನು ಮೀರಿದ ಒಂದು ಬಂಧನ ಈ ಸಮಾಜವನ್ನು ನಿಯಂತ್ರಿಸುತ್ತದೆ. ಇಡೀ ಗ್ರಾಮೀಣ ಪ್ರದೇಶದ ಘಟಕಗಳಾದ ಜಾತಿ, ಕುಟುಂಬ, ವ್ಯಕ್ತಿಗಳವರೆಗೂ ಈ ಸಂಬಂಧ ಹರಿದುಬರುತ್ತದೆ. ಅಂತೆಯೇ ಒಂದು ಮನೆತನಕ್ಕೆ ಸಂಬಂಧಿಸಿದ ವೈಯಕ್ತಿಕ ದುಃಖ ನೋವುಗಳು ಬಹು ಬೇಗನೆ ಉಳಿದವರನ್ನೂ ತಟ್ಟುತ್ತವೆ. ಈ "ಗುಂಪಿನ ಸಮಷ್ಟಿ ಪ್ರಜ್ಞೆಯ ಪ್ರತೀಕ ರೂಪವಾಗಿ, ಆ ಜನತೆಯ ಔನ್ನತ್ಯದ ಸಂಕೇತವಾಗಿ ಅವಿರ್ಭವಿಸುವ ರಚನೆ ಮಹಾಕಾವ್ಯ ಎನಿಸಿಕೊಳ್ಳುತ್ತದೆ. ಈ ರಚನೆ ಏಕ ಕವಿ ಕೃತವಾಗಿರದೆ ಸಮಷ್ಟಿಕೃತವಾಗಿರುವುದರಿಂದ ಇದನ್ನು ಜನಪದ ಮಹಾಕಾವ್ಯ (Flok) ಎಂದು ಕರೆಯಲಾಗಿದೆ."[7]

ಇಂತಹ ಕಾವ್ಯ ಯಾವುದೋ ಅನಾಮಧೇಯ ವ್ಯಕ್ತಿಯೊಬ್ಬರಿಂದ ರಚನೆಗೊಂಡು ಮತ್ತೆ ಯಾರದೋ ಪ್ರಯತ್ನದಿಂದ ಒಂದೊಂದು ಪ್ರಸಂಗಗಳು ಹುಟ್ಟಿಕೊಂಡು ಮತ್ತೆ ಯಾರಿಂದಲೋ ಬೇರೆ ಬೇರೆ ಕಥಾ ಸೃಷ್ಟಿಯಾಗಿ ಹಲವಾರು ವ್ಯಕ್ತಿಗಳಿಂದ ಅದು ವಿಕಾಸ ಹೊಂದುತ್ತಲೇ ಸಾಗಿ ಬರುತ್ತದೆ. ಹೀಗೆ ಸಾಗಿ ಬಂದ ಕಥೆ ಒಂದು ಕಥಾನಕದ ಮೇಲೆ ಮತ್ತೊಂದು ಕಥಾನಕ ಸೃಷ್ಟಿಯಾಗಿ ಹಲವಾರು ವ್ಯಕ್ತಿಗಳಿಂದ ಅದು ವಿಕಾಸ ಪಡೆಯುತ್ತಲೇ ಹೋಗುತ್ತದೆ. ಒಂದೊಂದು ಕಥೆಯಿಂದ ಮತ್ತೊಂದು ಕಥೆಗೆ ಹಬ್ಬಿ ಹಂದರವೇರಿ ಸಹಜ ಕಾವ್ಯರೂಪ ತಾಳುತ್ತಾ ಹೋಗುತ್ತದೆ. "ಜನಪದ ಗೀತೆಗಳನ್ನು ಈಗಿರುವಂತೆ ನೋಡಿ ಅವುಗಳ ರಚನಾ ಕಾಲವನ್ನು ಹೇಳಲು ಸಾಧ್ಯವಿಲ್ಲ. ಸ್ವರೂಪ ಲಕ್ಷಣದಿಂದ ಅವು ಸನಾತನವೂ ಅಲ್ಲ, ಅರ್ವಾಚೀನವೂ ಅಲ್ಲ. ಅವುಗಳ ಮೂಲವು ಪ್ರಾಚೀನ ಕಾಲ ಗರ್ಭದಲ್ಲಿರುತ್ತದೆ. ಅಲ್ಲಿಂದ ಅದು ಸತ್ವ ಗ್ರಹಣಮಾಡಿ, ನಿರಂತರವೂ ಹೊಸತಾಗಿ ಪಲ್ಲವಿಸುತ್ತ, ಕುಸುಮಿಸುತ್ತ, ಫಲಿಸುವ ಸಾಹಿತ್ಯ ಸಸ್ಯಗಳಿವು. ಪ್ರೌಢ ಸಾಹಿತ್ಯದ ಪ್ರಭಾವ ಇವುಗಳಿಗೆ ಬಿದ್ದಿರುವಂತೆ, ಇವುಗಳ ಪ್ರಭಾವವು ಪ್ರೌಢ ಕೃತಿಗಳಿಗೂ ಬಿದ್ದಿದೆ."[8]ದೇಶೀ ಮಾರ್ಗಗಳ ಸಮನ್ವಯ ಸಾಧಿಸಿಕೊಂಡ ಶಿಷ್ಟ ಕಾವ್ಯಗಳಿಗೆ ಜನಪದ ಕಾವ್ಯ ಸಮನಾಗಿ ನಿಲ್ಲುತ್ತದೆ. ಇವು ಯಾವ ಸಾಮರ್ಥ್ಯ ಪ್ರದರ್ಶನಕ್ಕಾಗಿ ನಿರ್ಮಾಣಗೊಂಡವಲ್ಲ. ಗ್ರಂಥಸ್ಥ ರೂಪ ಪಡೆದವೂ ಅಲ್ಲ. ಬಾಯಿಂದ ಬಾಯಿಗೆ ಹಾಡಾಗಿ ತಾನೇ ತಾನಾಗಿ ಸಾಗರದಂತೆ ಉಕ್ಕಿ ಹರಿದು ಬಂದವುಗಳು. ಅವುಗಳದು ಆಶುರಚನೆ. ಇಂತಹ ಕಾವ್ಯಗಳನ್ನು ಹಾಡುವ ಗಾಯಕರ ಮಟ್ಟು ಕೂಡಾ ಸ್ವತಂತ್ರವೆನ್ನಬಹುದು. ಇವು ತಲೆ ತಲಾಂತರದಿಂದ ಸಾಗಿ ಬಂದವುಗಳು. ಕರ್ತೃ, ಕವಿಗಳ ನಾಮವಿಲ್ಲದೆ ಅನಾಥವಾಗಿ ಬೆಳೆದು ಬಂದವುಗಳು. ಇವು ಸಹಜ ಕವಿತೆಗಳು "A Poem composes itself" ಎಂಬ ಮಾತು ಇವುಗಳಿಗೆ ಸರಿಯಾಗಿ ಅನ್ವಯಿಸುತ್ತದೆ. ಕಾವ್ಯ, ಕಥೆ, ಭಾವ, ಸ್ಪಂದನ, ಛಂದಸ್ಸು, ದೇವ ದೇವತೆಗಳು, ಸ್ತ್ರೀ–ಪುರುಷ ಪಾತ್ರಗಳು, ಪ್ರಾಣಿ–ಪಕ್ಷಿ, ರಾಜ–ರಾಣಿ, ನಾಯಕ–ನಾಯಕಿಯರು, ಸಾಧು–ಸಂತರು, ಸಾಂಸ್ಕೃತಿಕ ವೀರರಾಗಿ ಬೆಳೆದರೂ ಜನ ಸಾಮಾನ್ಯರಂತೆ ಇಲ್ಲಿ ವರ್ತಿಸುತ್ತಾರೆ. ಇವು ನಿರಾಡಂಬರವಾದ, ಕೋಲಾಹಲ, ಪಾಂಡಿತ್ಯ, ಕೃತ್ರಿಮತೆ, ಆಡಂಬರವಿಲ್ಲದ ಕಾವ್ಯಗಳಾಗಿವೆ. ಇವುಗಳನ್ನು ಛಂದಸ್ಸು, ವ್ಯಾಕರಣ, ರಸ, ಧ್ವನಿ, ಅಲಂಕಾರಗಳಿಗಾಗಿ ರಚನೆ ಮಾಡದಿದ್ದರೂ ತಿಳಿದೂ ತಿಳಿಯದೆ ಎಲ್ಲವೂ ಅಲ್ಲಿ ಅಡಗಿವೆ.

## 2. ಜಾಗತಿಕ ನೆಲೆಯಲ್ಲಿ:

ಇತ್ತೀಚಿನ ದಶಕಗಳಲ್ಲಿ ಜನಪದ ಕಾವ್ಯಗಳ ಕುರಿತು ಪಾಶ್ಚಾತ್ಯ ದೇಶಗಳಲ್ಲಿ ವ್ಯಾಪಕವಾದ ಅಧ್ಯಯನ ನಡೆಯುತ್ತಿದೆ. ಫಿನ್ಲೆಂಡಿನ ಜನತೆ ಸುಮಾರು 600 ವರ್ಷಗಳ ಕಾಲ ಪರಕೀಯರ ಪ್ರಭಾವದಲ್ಲಿ ಉಸಿರುಗಟ್ಟಿಕೊಂಡಿರಬೇಕಾಗಿತ್ತು. ಆದರೆ ಅಲ್ಲಿಯ ಜನತೆಯ ಆತ್ಮವಿಶ್ವಾಸ ರಾಷ್ಟ್ರೀಯ ಮನೋಭಾವದಿಂದಾಗಿ ಸಂಸ್ಕೃತಿ ಮತ್ತು ಭಾಷೆಯನ್ನು ಉಳಿಸಿಕೊಳ್ಳಲು ವಿದ್ವಾಂಸರು ಪ್ರಯತ್ನಿಸಿದರು. ನಸಿಸಿ ಹೋಗುತ್ತಿದ್ದ ಪರಂಪರೆಯನ್ನು ಉಳಿಸಿಕೊಳ್ಳಲು ಅವರಿಗೆ ಉಳಿದಿದ್ದು ಇದೊಂದೇ ಮಾರ್ಗವಾಗಿತ್ತು. ಹೀಗಾಗಿ ಅವರು

ಹಗಲಿರುಳು ಶ್ರಮಿಸಿದರು. ಅಲ್ಲಿಯ ಜಾನಪದ ವಿದ್ವಾಂಸರು ಹಲವು ಸಂಘ ಸಂಸ್ಥೆಗಳನ್ನು ರೂಪಿಸಿಕೊಂಡು, ಅದರ ಮೂಲಕ ಅದ್ಭುತ ಕಾರ್ಯ ಸಾಧಿಸಿದರು. ಫಿನ್‍ಲೆಂಡಿನ ರಾಷ್ಟ್ರೀಯ ಜನಪದ ಕಾವ್ಯ ಕಲೇವಾಲ 1835ರಲ್ಲಿ ರೂಪುಗೊಂಡಿತು. ಕಲೇವಾಲ ಎಂಬ ಒಬ್ಬ ವೀರ ಪುರುಷನ ಚರಿತ್ರೆಯನ್ನು ಅದು ಒಳಗೊಂಡಿದೆ. ಹರಿದು ಹಂಚಿ ಹೋಗಿದ್ದ ಈ ಕಾವ್ಯವನ್ನು ಅಲ್ಲಿನ ವಿದ್ವಾಂಸರು ಈ ಕಲೇವಾಲ ರಚಿಸಿಕೊಳ್ಳದೇ ಹೋಗಿದ್ದರೆ ಅಲ್ಲಿಯ ಪರಂಪರೆಯೇ ಇಲ್ಲವಾಗುತ್ತಿತ್ತು. ಭಾರತೀಯರಿಗೆ ರಾಮಾಯಣ, ಮಹಾಭಾರತ ಎಷ್ಟು ಮಹತ್ವವಾದವುಗಳೋ ಅಷ್ಟೇ ಫಿನ್‍ಲೆಂಡಿನ ಜನತೆಗೆ ಜನಪದ ಮಹಾಕಾವ್ಯ 'ಕಲೇವಾಲ' ಮಹತ್ವದ್ದಾಗಿದೆ.

ಫಿನ್‍ಲೆಂಡಿನ ವಿದ್ವಾಂಸರ ಪ್ರಯತ್ನ ಜಗತ್ತಿನ ಇತರ ದೇಶಗಳ ಮೇಲೆ ಪ್ರಭಾವ ಬೀರಿತು. ಇದರಿಂದ ಪ್ರೇರಣೆಗೊಂಡ ಜನಪದ ವಿದ್ವಾಂಸರು ಆಯಾ ದೇಶಗಳ ಜನಪದ ಕಾವ್ಯಗಳನ್ನು ಗುರುತಿಸಲು ತೊಡಗಿದರು. ಔದ್ಯೋಗಿಕ ಕ್ರಾಂತಿಯ ಅವಸರದ ಜೀವನ, ಹಿಂದಿನ ಪ್ರಶಾಂತ ಜೀವನವನ್ನು, ನೆಮ್ಮದಿಯನ್ನು ಬಹು ಮಟ್ಟಿಗೆ ಹಾಳುಗೆಡವಿತ್ತು. ಇದರಿಂದ ರೋಸಿ ಹೋಗಿದ್ದ ಜನತೆಗೆ ಜನಪದ ಹಾಡು, ಕಲೆ, ನೆಮ್ಮದಿಯನ್ನು ತಂದು ಕೊಡಬಲ್ಲವಾಗಿದ್ದವು. ಈ ಹಿನ್ನೆಲೆಯಲ್ಲಿ ತಮ್ಮ ಪರಂಪರೆಯನ್ನು ಕಾಯ್ದುಕೊಳ್ಳಲು ಮತ್ತು ಮೂಲ ಸಂಸ್ಕೃತಿಯನ್ನು ಯಾವುದೇ ರೂಪದಲ್ಲಿ ರಕ್ಷಿಸಿಕೊಳ್ಳಲು ಆಗದೆ ಬಹಳಷ್ಟು ರಾಷ್ಟ್ರಗಳು ಜಾನಪದದತ್ತ ತಮ್ಮ ದೃಷ್ಟಿಕೋನ ಹರಿಸಿದವು. ಜಗತ್ತಿನ ಬಲಾಢ್ಯ ರಾಷ್ಟ್ರಗಳಾದ ರಷ್ಯಾ, ಅಮೇರಿಕ ಒಳಗೊಂಡು ಆಫ್ರಿಕಾ, ಇಂಗ್ಲೆಂಡ್, ಜರ್ಮನ್ ಮುಂತಾದ ದೇಶಗಳಲ್ಲಿ ಜನಪದ ಕಾವ್ಯಗಳು ವಿದ್ವಾಂಸರಿಗೆ ಆಸಕ್ತಿಯ ಕ್ಷೇತ್ರವಾಗಿ ಪರಿಣಮಿಸಿದವು. ಇದರಿಂದಾಗಿ Floklore Fellows ಎನ್ನುವ ಅಂತರರಾಷ್ಟ್ರೀಯ ಜಾನಪದ ಅಧ್ಯಯನ ಕ್ಷೇತ್ರ ಬೆಳೆಸುವುದರೊಂದಿಗೆ ಜಗತ್ತಿನ ವಿದ್ವಾಂಸರನ್ನು ಒಂದೆಡೆ ಕೂಡಿಸಿ ವಿಚಾರಿಸುವಂತಾಯಿತು. ಈ ಸಂಸ್ಥೆ 1991, 1993, 1995ರಲ್ಲಿ ಅಂತರರಾಷ್ಟ್ರೀಯ ಕಮ್ಮಟಗಳನ್ನು ಏರ್ಪಡಿಸಿತು. ಅದರಿಂದಾಗಿ ಭಾರತವು ಸೇರಿದಂತೆ ವಿಶ್ವದ ಅನೇಕ ದೇಶಗಳು ಈ ಕ್ಷೇತ್ರದಲ್ಲಿ ಹೊಸ ಹೊಸ ಸಂಶೋಧನೆ ನಡೆಸಿ ಸಂಗ್ರಹ ಕಾರ್ಯಕ್ಕೆ ಕೈ ಹಾಕಲು ಸಾಧ್ಯವಾಯಿತು.

ವಿಶ್ವದ ನಕಾಶೆಯಲ್ಲಿ ಎದ್ದು ಕಾಣುವ ಮಹಾ ಕಾವ್ಯಗಳನ್ನು Louri Honko (1990:12) ಒಂದೆಡೆ ಹೀಗೆ ಪಟ್ಟಿ ಮಾಡುತ್ತಾನೆ. "E.Baelaert-'LE Popee national des Nkumdo' 1949, Daniedl Bi ibeyek and K.C. Mateene-"The M windo epic'-1971, Gordon Inne-'Sunjata : Three Mandinka versions'-1974, Nigel Phillip-'Sijobang sung Narrative poetry of West Sumatra'-1981, Brenda E.F. Beck-'The Three Twins: The Telling of South Indian Folk Epic' 1982"[9] ಇಲ್ಲಿಂದ ಮೊದಲು ಮಾಡಿ ರಾಷ್ಟ್ರೀಯ ಅಂತರರಾಷ್ಟ್ರೀಯ ವ್ಯಾಪ್ತಿಯಲ್ಲಿ ಜನಪದ ಕಾವ್ಯಗಳ ಕುರಿತು ಅಧ್ಯಯನ ನಡೆಯಿತು. ಸುಮಾರು ಎಪ್ಪತ್ತರ ದಶಕದಿಂದ ಭಾರತೀಯ ಜನಪದ ಕಾವ್ಯಗಳನ್ನು ಪಾಶ್ಚಿಮಾತ್ಯರು ಅಧ್ಯಯನ ಮಾಡುತ್ತಲೇ ಬಂದಿದ್ದಾರೆ. ಜನಪದ ಹಾಡುಗಾರರಲ್ಲಿ 'ಮಾನಸಿಕ ಪಠ್ಯ'ವಾಗಿ ಉಸಿರಾಡುತ್ತಿರುವ ಎಷ್ಟೋ ಕಾವ್ಯಗಳು ಆರಾಧನೆ, ಮನರಂಜನೆ ಮೊದಲಾದ ಸಂದರ್ಭಗಳಲ್ಲಿ ಹೊರ ಸೂಸುತ್ತಿವೆ. ಅದನ್ನು ಗಮನಿಸಿದ ವಿದೇಶಿಯ ಮತ್ತು ಸ್ವದೇಶಿಯ ವಿದ್ವಾಂಸರು ಅವುಗಳನ್ನು ಗುರುತಿಸಿ ಸಂಗ್ರಹಿಸುವ ಪ್ರಕಟಿಸುವ ಕಾರ್ಯಗಳಿಗೆ ಮುಂದಾದರು. ತುಳು ಜನಪದ ಮಹಾಕಾವ್ಯ 'ಅಣ್ಣನ್ಮಾರ್ ಕಥೈ' ಯನ್ನು ಬ್ರೆಂಡಾಬೆಕ್ ಅವರು ಅಧ್ಯಯನ ಮಾಡಿ 1982ರಲ್ಲಿ 'The Three Twins' ಎಂಬ ತಲೆ ಬರಹದಲ್ಲಿ ಪ್ರಕಟಪಡಿಸಿದರು. ಇದರಿಂದ ಪ್ರೇರಿತರಾದ ಭಾರತೀಯರು ದೇಶೀಯ ನೆಲೆಯಲ್ಲಿ ಕಾವ್ಯಗಳ ಶೋಧನೆಗೆ ತೊಡಗಿದರು.

**3. ಭಾರತದಲ್ಲಿ ಜಾನಪದ ಅಧ್ಯಯನ:**

ಭಾರತದಲ್ಲಿ 18ನೇ ಶತಮಾನದಿಂದ ಜಾನಪದ ಅಧ್ಯಯನಕ್ಕೆ ನಾಂದಿಯಾಯಿತು. ಪಾಶ್ಚಾತ್ಯ ವಿದ್ವಾಂಸರು ಭಾರತೀಯ ಸಂಸ್ಕೃತಿಯ ಬಗ್ಗೆ ತಾಳಿದ ತೀವ್ರ ಆಸಕ್ತಿಯಿಂದಾಗಿ ಇಂಡಾಲಜಿಯ ಒಂದು ಭಾಗವಾಗಿ ಜಾನಪದ ಬೆಳವಣಿಗೆ ಪಡೆಯಿತು. ಭಾರತದಲ್ಲಿಯ ಆಚಾರ–ವಿಚಾರ, ಸಂಪ್ರದಾಯ, ಧರ್ಮ, ಸಂಸ್ಕೃತಿ, ಪುರಾಣ, ಬೇರೆ ಬೇರೆ ಭಾಷೆಗಳು ಅವರ ಅಧ್ಯಯನಕ್ಕೆ ಆಕರಗಳಾದವು. ಬಂಗಾಳದಲ್ಲಿ 1784ರಲ್ಲಿ ವಿಲಿಯಂ ಜೋನ್ಸ್ 'ಏಷ್ಯಾಟಿಕ್ ಸೊಸೈಟಿ' ಪ್ರಾರಂಭಿಸಿದ.[10] ಇದರ ಆಶ್ರಯದಲ್ಲಿ ಕಲೆ, ಸಾಹಿತ್ಯ, ವಿಜ್ಞಾನ, ಇತಿಹಾಸ ಪುರಾತನ ವಿಷಯಗಳು ಹೊರಬಂದವು. ಜಗತ್ತಿನ ಎಲ್ಲ ಕಡೆ ಜನಪದ ಸಾಹಿತ್ಯ ಜನರ ಆಸಕ್ತಿಯ ಕ್ಷೇತ್ರವಾಯಿತು. ಜಾನಪದ ಸಂಗ್ರಹಕಾರರು ಮೊದ ಮೊದಲು ಗಮನ ಹರಿಸಿದ್ದು ಜನಪದ ಸಾಹಿತ್ಯ ಸಂಗ್ರಹಕ್ಕೆ ಎಂದರೆ ತಪ್ಪಾಗಲಿಕ್ಕಿಲ್ಲ.

ವಿಶ್ವದ ಅನೇಕ ಮಹಾಕಾವ್ಯಗಳಲ್ಲಿ ಅಲ್ಲಿಯ ಜನಾಂಗದ ಜಾನಪದೀಯ ಅಂಶವಿರುವುದು ಗಮನಿಸಬಹುದು. ಭಾರತದಲ್ಲಿ ವೇದಗಳ ಕಾಲದಿಂದಲೂ ಜಾನಪದೀಯ ಅಂಶಗಳನ್ನು ಗುರುತಿಸಲಾಗುತ್ತದೆ. ಗುಣಾಢ್ಯನ "ಬೃಹತ್ಕಥೆ" ಕ್ಷೇಮೇಂದ್ರನ 'ಬೃಹತ್ಕಥಾಮಂಜರಿ', ಸೋಮದೇವನ 'ಕಥಾಸರಿತ್ಸಾಗರ', 'ಪಂಚತಂತ್ರ', ಶುಕಸಪ್ತತಿ, ಹಿತೋಪದೇಶ, ಬೇತಾಳ ಪಂಚವಿಂಶತಿ ಇತ್ಯಾದಿಗಳು ಜನಪದ ಮೂಲದಿಂದ ಸೃಷ್ಟಿಯಾದ ಕಥೆಗಳಾಗಿವೆ. ಪ್ರಪಂಚದ ಅನೇಕ ಕಥೆಗಳಲ್ಲಿ ಜನಪದ, ಗದ್ಯ ಪದ್ಯ ಪ್ರಕಾರಗಳು ಓದುಗರ ಗಮನ ಸೆಳೆದಿವೆ. 1812ರಲ್ಲಿ ಜರ್ಮನಿಯ ಜೇಕಬ್ ಮತ್ತು ವಿಲ್ ಹೆಲ್ಮ್ ಗ್ರೀಮ್ ಸಹೋದರರು ಜನಪದ ಸಂಗ್ರಹಕ್ಕೆ ವೈಜ್ಞಾನಿಕ ಪರಂಪರೆಯನ್ನು ಹಾಕಿಕೊಟ್ಟರು. ಫಿನ್‍ಲೆಂಡ್, ಸ್ಪೇನ್ ಮುಂತಾದ ದೇಶಗಳ ಜನಪದ ಕಾವ್ಯಗಳ ಪ್ರಕಟಣೆ, ಪ್ರೊ. ಚೈಲ್ಡ್ ಮುಂತಾದವರ ಕಾವ್ಯ ಸಂಗ್ರಹಗಳು ಗ್ರೀಮ್ ಸಹೋದರರು ಜಗತ್ತಿಗೆ ತೋರಿಸಿಕೊಟ್ಟರು.1982ರಲ್ಲಿ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದಲ್ಲಿ Oral Epics in India ವಿಚಾರ ಸಂಕಿರಣ ನಡೆಯಿತು. ಅಲ್ಲಿ ಭಾರತದ ಪ್ರತಿನಿಧಿಯಾಗಿ ಪ್ರೊ. ಜಿ.ಶಂ. ಪರಮಶಿವಯ್ಯ, ಪ್ರೊ. ವಿ.ನಾರಾಯಣರಾವ್, ಡಾ. ಕೋಮಲ್ ಕೊಠಾರಿ, ಡಾ. ಸುಂದರಂ, ಅಮೆರಿಕದ ಜಾನಪದ ವಿದ್ವಾಂಸರಾದ ಸ್ಟುವರ್ಟ್ ಬ್ಲಾಕ್ ಬರ್ನ್, ಪೀಟರ್ ಜೆ. ಕ್ಲಾಸ್ ಜಾಯ್ಸ್ ಪ್ಲೊಕ್ಕಿಗರ್ ಸೂಸನ್ ವ್ಯಾಡ್ಲೆ ಬ್ರೆಂಡಾ ಬೆಕ್[11] ಮುಂತಾದವರು ಭಾಗವಹಿಸಿದರು. ಈ ಜಾನಪದ ವಿದ್ವಾಂಸರು ಅಲ್ಲಿ ತಮ್ಮ ವಿಮರ್ಶಾತ್ಮಕ ಸಂಶೋಧನ ಪ್ರಬಂಧಗಳನ್ನು ಮಂಡಿಸಿದರು. ಭಾರತದಲ್ಲಿ ಲಭ್ಯವಾಗುವ ಜನಪದ ಕಾವ್ಯಗಳನ್ನು 1989ರಲ್ಲಿ Oral Epics in India ಎಂಬ ಗ್ರಂಥದಲ್ಲಿ 13 ಜನಪದ ಮಹಾಕಾವ್ಯಗಳನ್ನು ಸ್ಟುವರ್ಟ್ ಬ್ಲಾಕ್ ಬರ್ನ್ ಅವರು ಅವುಗಳ ಸ್ವರೂಪ, ಬುಡಕಟ್ಟುಗಳ ಸಂಬಂಧ, ಹಾಡುಗಾರರ ಜಾತಿ, ಉದ್ದೇಶ, ರಚನೆಗಳನ್ನು ರಾಮಾಯಣ, ಮಹಾಭಾರತ, ಕಾವ್ಯಗಳ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಬ್ಲಾಕ್ ಬರ್ನ್ ಹೇಳಿರುವ ಮಾತುಗಳನ್ನು ಇಲ್ಲಿ ಗಮನಿಸಬಹುದು. "ಜನಪದ ಮಹಾಕಾವ್ಯ ಒಂದು ಜನಪದ ಗುಂಪಿನ ಸ್ವಯಂ ಪ್ರತಿಮೆ (Self Image) ಏನೆಂಬುದನ್ನು ತಿಳಿಸುತ್ತದೆ. ಆ ಗುಂಪಿನ ಇತಿಹಾಸದ ಯಾವುದೋ ಒತ್ತಡದ ಸ್ಥಿತಿಯಲ್ಲಿ ಹುಟ್ಟಿಕೊಂಡಿರಬೇಕು ಅಥವಾ ಒಂದು ವ್ಯವಸ್ಥೆಯಿಂದ ಇನ್ನೊಂದು ವ್ಯವಸ್ಥೆಗೆ ಆ ಸಮುದಾಯ ವರ್ಗಾವಣೆಗೊಳ್ಳುವ ಒತ್ತಡದ ಸಂಕ್ರಮಣಾವಸ್ಥೆಯಲ್ಲಿ ಈ ಮಹಾ ಕಾವ್ಯಗಳು ಹುಟ್ಟಿಕೊಳ್ಳುತ್ತವೆ"[12] ಹೀಗೆ ಕಾವ್ಯಗಳ ಹುಟ್ಟಿಗೆ ಅನೇಕ ಕಾರಣಗಳು ಮುಖ್ಯವಾಗಿ ನಿಲ್ಲುತ್ತವೆ.

ಪಾಶ್ಚಾತ್ಯ ವಿದ್ವಾಂಸರ ಪ್ರಯತ್ನದ ಫಲವಾಗಿ ಬಹಳಷ್ಟು ಜನ ದೇಶಿ–

ವಿದೇಶಿ ವಿದ್ವಾಂಸರು ಜನಪದ ಸಂಗ್ರಹ ಕಾರ್ಯಕ್ಕೆ ತೊಡಗಿದರು. "ಎಂ.ಫಿರೇ ಅವರ Old Deccan days (1868) ಸಿ.ಇ. ಗೋಟರ ಅವರ "ದಕ್ಷಿಣ ಭಾರತದ ಜನಪದ ಗೀತೆಗಳು" (1872), P.R.T. ಗುರ್ದನ್ ಅವರ "ಕೆಲವು ಅಸ್ಸಾಮಿ ಗಾದೆಗಳು" (1881), ಗ್ರಿಯರ್ ಸನ್ ಅವರ "ಭೋಜಪುರಿ ಜನಪದ ಗೀತೆಗಳು" 1884, L.B. ಡೇ ಅವರ "ಬಂಗಾಲದ ಜನಪದ ಕಥೆಗಳು" (1883), ಫ್ಲೋರ್‌ಸ್ಟೀಲಿ ಮತ್ತು ರಿಚರ್ಡ್ ಟೆಂಪಲ್ ಅವರ, ಪಂಜಾಬಿನ "The wide Awaks stories" (1884)[13], ಮುಂತಾದ ಸಂಗ್ರಹಗಳು ಜನಪದ ಕಥೆ, ಗಾದೆ, ಒಗಟು, ಗೀತೆಗಳ ಬಗ್ಗೆ ಗಮನಸೆಳೆದು ಅದೊಂದು ಅಧ್ಯಯನ ವಿಶೇಷವಾದ ಕ್ಷೇತ್ರವಾಗಿ ಬೆಳೆಯಲು ಸಹಾಯಕವಾಯಿತು. ಭಾರತದಲ್ಲಿಯೂ ಜಾನಪದದ ಬಗ್ಗೆ ಅಲ್ಪ ಸ್ವಲ್ಪ ಕೆಲಸ ಅಲ್ಲಲ್ಲಿ ನಡೆಯುತ್ತಾ ಬಂದಿತಾದರೂ, ಅದು ಚುರುಕುಗೊಂಡು, ಜಾನಪದದ ಬಹುಮುಖವನ್ನು ಗುರುತಿಸಿ ಶಾಸ್ತ್ರೀಯವಾದ ಕೆಲಸವನ್ನು ಆರಂಭಿಸಿದ್ದು ತೀರಾ ಇತ್ತೀಚೆಗೆ. ಈ ಮಾತು ಸಂಪೂರ್ಣವಾಗಿ ದೇಶದ ಎಲ್ಲ ಭಾಷೆಗಳ ಜಾನಪದ ಸಾಹಿತ್ಯಕ್ಕೂ ಅನ್ವಯವಾಗುತ್ತದೆ. 'ಜಾನಪದ' ಬಹುದೊಡ್ಡ ಶಾಖೆ. 'ಜನಪದ ಸಾಹಿತ್ಯ' ಅದರದೊಂದು ಉಪಶಾಖೆಯಾಗಿ ಇಂದು ಬೆಳೆಯುತ್ತಿದೆ.

ಜನರ ಮಾನಸಿಕ ಉಸಿರಾಟದಲ್ಲಿ ಉಳಿದುಕೊಂಡು ವಿದೇಶಗಳಲ್ಲಿ ಗುರುತಿಸಿದ ಮಹಾಕಾವ್ಯಗಳಂತೆ ಭಾರತದಲ್ಲಿಯೂ ಗುರುತಿಸಲಾಗಿದೆ. ಜನತೆಯ ನೋವು, ನಲಿವು, ಆರಾಧನೆ, ಆಚರಣೆ ಮೊದಲಾದವುಗಳನ್ನೊಳಗೊಂಡ ಕಾವ್ಯಗಳನ್ನು Black burn ಅವರು 'Oral epics in India' ಎಂಬ ಗ್ರಂಥದ ಮೂಲಕ ದಾಖಲಿಸುವ ಕಾರ್ಯ ನಡೆಸಿದ್ದಾರೆ. ಅನೇಕ ವಿದ್ವಾಂಸರು ಕೂಡಿಕೊಂಡು ಸುಮಾರು ದೇಶಿಯ ಜನಪದ ಮಹಾ ಕಾವ್ಯಗಳನ್ನು ಗುರುತಿಸಿದ್ದಾರೆ.[14] ಭಾರತದ ಭೌಗೋಳಿಕ ಪ್ರದೇಶದಲ್ಲಿ ದೊರೆತ ಬಹುಮುಖ್ಯವಾದ ಜನಪದ ಮಹಾಕಾವ್ಯಗಳನ್ನು ಈ ರೀತಿ ಗುರುತಿಸಬಹುದು.

1. ಲೋರಿಕ್ ಚಂದಾ (Lorik Chanda) ಮಹಾಕಾವ್ಯ: ಮಧ್ಯಪ್ರದೇಶ, ಉತ್ತರ ಪ್ರದೇಶ, ಬಿಹಾರಗಳಲ್ಲಿ,
2. ಅಲ್ಹಾ (Alha) ಮಹಾಕಾವ್ಯ: ಉತ್ತರಪ್ರದೇಶದ ಹಿಂದಿ ಭಾಷಾ ಪ್ರಧಾನವಾದ ಪ್ರದೇಶಗಳಲ್ಲಿ,
3. ಅಣ್ಣನ್ಮಾರ್ (Annanmar) ಮಹಾಕಾವ್ಯ: ತಮಿಳುನಾಡು ಕೊಂಗು ಪ್ರದೇಶದಲ್ಲಿ,
4. ಬಿಲ್ಲಿನ ಹಾಡು (Bow Song) ಮಹಾಕಾವ್ಯ: ತಮಿಳ್ನಾಡಿನ ತಿರುನೆಲ್ವೇಲಿ ಪ್ರದೇಶದಲ್ಲಿ,
5. ದೇವನಾರಾಯಣ (Devanarayana) ಮಹಾಕಾವ್ಯ: ರಾಜಸ್ಥಾನದಲ್ಲಿ,
6. ಧೋಲಮಾರು (Dholamaru) ಮಹಾಕಾವ್ಯ: ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳ ಪಶ್ಚಿಮ ಭಾಗಗಳಲ್ಲಿ.
7. ಗೂಗಾ (Guga) ಮಹಾಕಾವ್ಯ: ರಾಜಸ್ಥಾನ, ಪಂಜಾಬಿನ ಹರಿಯಾಣ, ಉತ್ತರ ಪ್ರದೇಶದ ಈಶಾನ್ಯ ಭಾಗಗಳಲ್ಲಿ,
8. ಜುಂಜಪ್ಪ (Junjappa) ಮಹಾಕಾವ್ಯ: ಕರ್ನಾಟಕದಲ್ಲಿ
9. ಪಾಬೂಜಿ (Pabuji) ಮಹಾಕಾವ್ಯ: ರಾಜಸ್ಥಾನದಲ್ಲಿ,
10. ಪಲ್ನಾಡು (Palnadu) ಮಹಾಕಾವ್ಯ: ಆಂಧ್ರಪ್ರದೇಶದ ತೆಲುಗು ಭಾಷಾ ಪ್ರಧಾನವಾದ ಪ್ರದೇಶದಲ್ಲಿ,
11. ಎಲ್ಲಮ್ಮ (Ellamma) ಮಹಾಕಾವ್ಯ: ಉತ್ತರ ಕರ್ನಾಟಕದಲ್ಲಿ,
12. ತೆಯ್ಯಂ (Teyyam) ಮಹಾಕಾವ್ಯ: ಕೇರಳದಲ್ಲಿ,
13. ಪಾಡ್ದನ (Paddana) ಮಹಾಕಾವ್ಯ: ಕರಾವಳಿ ಕರ್ನಾಟಕದ ತುಳು ನಾಡಿನಲ್ಲಿ'[15].

ಇಷ್ಟು ಕಾವ್ಯಗಳನ್ನು ನಂದಾವರ ತಮ್ಮ ಲೇಖನದಲ್ಲಿ ಗುರುತಿಸಿ ಮುಂದುವರಿದು ಅವುಗಳ ವರ್ಗ ವಿಂಗಡಣೆಗಳನ್ನು ಈ ರೀತಿ ವರ್ಗೀಕರಿಸಿರುತ್ತಾರೆ.

1. ಸ್ಥಳೀಯ ವರ್ಗ (Local group): 10 ರಿಂದ 100 ಮೈಲು ವ್ಯಾಪ್ತಿ: ತಂಪಿಮಾರ್ (Tampimar) ಬಿಲ್ಲಿನ ಹಾಡು, ಕೋಡ್ದಬ್ಬು, ಪಾಡ್ದನ, ತೆಯ್ಯಂ ಇವು ಈ ವರ್ಗದಲ್ಲಿ ಬರುತ್ತವೆ. ಬಹುಶಃ ಸಿರಿ, ಕೋಟಿ ಚನ್ನಯ್ಯ ಮಹಾಕಾವ್ಯಗಳು ಈ ವರ್ಗದಲ್ಲಿ ಸೇರುತ್ತವೆ.
2. ಉಪಪ್ರಾದೇಶಿಕ ವರ್ಗ (Sub regional group): 100 ರಿಂದ 200 ಮೈಲು ವ್ಯಾಪ್ತಿ: ಅಣ್ಣನ್ಮಾರ್, ಪಲ್ನಾಡು; ಜುಂಜಪ್ಪ, ಕನ್ಯಕಾ ಈ ವರ್ಗದಲ್ಲಿ ಬರುತ್ತವೆ.
3. ಪ್ರಾದೇಶಿಕ (Regional) ವರ್ಗ: 200 ರಿಂದ 300 ಮೈಲು ವ್ಯಾಪ್ತಿ: ಪಾಬೂಜಿ, ದೇವನಾರಾಯಣ, ಎಲ್ಲಮ್ಮ, ತೋಲು ಬೊಮ್ಮಲಾಟ ಈ ಗುಂಪಿನವುಗಳು.
4. ಪ್ರದೇಶಿಕಾತೀತ (Supra Regional) ವರ್ಗ: 300 ರಿಂದ 400 ಮೈಲು ಮತ್ತು ಅದಕ್ಕಿಂತಲೂ ಅಧಿಕ ವ್ಯಾಪ್ತಿ: ಲೋರಿಕ್ ಚಂದಾ; ಗೂಗಾ, ಧೋಲಾ, ಅಲ್ಹಾ ಇವು ಈ ವರ್ಗದವುಗಳು.

| ಕ್ರ. ಸಂ. | ಗುಂಪುಗಳು | ಕಾವ್ಯಗಳು | ಪ್ರದೇಶ | ಮೈಲುಗಳ ಪ್ರಸಾರ |
|---|---|---|---|---|
| 1 | ಸ್ಥಳೀಯ ಗುಂಪು | ತಂಪಿಮಾರ್, | ತಮಿಳುನಾಡು | 10 ರಿಂದ 100 |
| | | ಬಿಲ್ಲಿನ ಹಾಡು | ತಿರುನೆಲ್ವೇಲಿ | --ಅದೇ-- |
| | | ಪಾಡ್ದನ | ಕರ್ನಾಟಕದ ಕರಾವಳಿ, ತಮಿಳ್ನಾಡು | --ಅದೇ-- |
| | | ತೆಯ್ಯಂ | ಕೇರಳ | --ಅದೇ-- |
| | | ಸಿರಿ, ಕೋಟಿ ಚನ್ನಯ್ಯ | ಕರ್ನಾಟಕ ಕರಾವಳಿ | --ಅದೇ-- |
| 2 | ಉಪಪ್ರಾದೇಶಿಕ ಗುಂಪು | ಅಣ್ಣನ್ಮಾರ್ | ತಮಿಳ್ನಾಡು, ಕೊಂಗು ಪ್ರದೇಶ | 100 ರಿಂದ 200 |
| | | ಪಲ್ನಾಡು | ತೆಲುಗು ಪ್ರಧಾನವಾದ ಆಂಧ್ರ | --ಅದೇ-- |
| | | ಜುಂಜಪ್ಪ | ಕರ್ನಾಟಕ | --ಅದೇ-- |
| 3 | ಪ್ರಾದೇಶಿಕ ಗುಂಪು | ಪಾಬೂಜಿ | ರಾಜಸ್ಥಾನ | 200 ರಿಂದ 300 |
| | | ದೇವನಾರಾಯಣ | ರಾಜಸ್ಥಾನ | --ಅದೇ-- |
| | | ಎಲ್ಲಮ್ಮ | ಉತ್ತರ ಕರ್ನಾಟಕ | --ಅದೇ-- |
| 4 | ಪ್ರಾದೇಶಿಕಾತೀತ ಗುಂಪು | ಲೋರಿಕ್ ಚಂದಾ | ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ | 300 ರಿಂದ 400 |
| | | ಗೂಗಾ | ಉತ್ತರಪ್ರದೇಶ, ಪಂಜಾಬ, ರಾಜಸ್ಥಾನ, ಹರಿಯಾಣ | --ಅದೇ-- |
| | | ಅಲ್ಹಾ | ಉತ್ತರಪ್ರದೇಶ, ಹಿಂದಿ ಪ್ರಧಾನ ಸ್ಥಳಗಳಲ್ಲಿ | --ಅದೇ-- |
| | | ಧೋಲಾ | ಉತ್ತರಪ್ರದೇಶ, ರಾಜಸ್ಥಾನ | --ಅದೇ-- |

ಈ ಕಾವ್ಯಗಳನ್ನು ಮುಖ್ಯವಾಗಿ 1) ಧಾರ್ಮಿಕ 2) ಲೌಕಿಕ ಎಂದು ಇಟ್ಟುಕೊಂಡು ಆಯಾ ಗುಂಪಿಗೆ ಸೇರುವ ಕಾವ್ಯಗಳನ್ನು ಈ ರೀತಿ ಗುರುತಿಸಬಹುದು.

**ಧಾರ್ಮಿಕ ಕಾವ್ಯಗಳು**

ಎಲ್ಲಮ್ಮ, ಅಣ್ಣನ್ಮಾರ್, ಪಲ್ನಾಡು, ಪಾಬೂಜಿ, ಜುಂಜಪ್ಪ, ಗೂಗಾ, ದೇವನಾರಾಯಣ, ಕೋಟಿ ಚನ್ನಯ್ಯ, ಮುತ್ತಪ್ಪಟನ್, ತೆಯ್ಯಂ, ತಂಪಿಮಾರ್ ಕೋಡ್ದಬ್ಬು, ಕನ್ಯಕಾ, ಮಲೇಮಾದೇಶ್ವರ, ಮಂಟೇಸ್ವಾಮಿ, ಹಾಲುಮತ, ಮೈಲಾರಲಿಂಗ ಮುಂತಾದವು.

**ಲೌಕಿಕ ಕಾವ್ಯಗಳು**

ಧೋಲಾ, ಲೋರಿಕ್ ಚಂದಾ, ತೋಲು ಬೊಮ್ಮಲಾಟ, ಅಲ್ಹಾ, ಹರದೇಶಿ–ನಾಗೇಶಿ, ಬುರ್ರಕಥಾ ಮುಂತಾದವು ಮೇಲಿನ ಎರಡು ವರ್ಗದ ಮಹಾ ಕಾವ್ಯಗಳಲ್ಲಿ ಶೃಂಗಾರ ಕಾವ್ಯಗಳು, ತ್ಯಾಗ ಕಾವ್ಯಗಳು, ವೀರ ಕಾವ್ಯಗಳು, ಮನರಂಜನ ಕಾವ್ಯಗಳು, ಶೋಕ ಕಾವ್ಯಗಳೆಂದು ಸೇರ್ಪಡೆಯಾಗಿವೆ. ಭಾರತ ವಿವಿಧ ಭಾಷೆ, ಜಾತಿ, ಮತ–ಧರ್ಮ, ಅನೇಕ ಬುಡಕಟ್ಟು ಜನಾಂಗಗಳಿಂದ ಕೂಡಿದ ನಾಡಾಗಿದೆ. ಇದರೊಂದಿಗೆ ಅಷ್ಟೇ ಸಮೃದ್ಧಿಯಾದ ಸಾಹಿತ್ಯ ಸೃಷ್ಟಿಯಾಗಿರುವುದೂ ನಿಜ. ಈ ಕಾವ್ಯಗಳು ಇಂದು ಹಾಡುಗಾರರಿಂದ ಮತ್ತು ಕೇಳುಗರಿಂದ ವಂಚಿತವಾಗುತ್ತಿರುವುದು ದುರದೃಷ್ಟಕರ. ಅವುಗಳನ್ನು ಉಳಿಸಿಕೊಳ್ಳಲು ವಿಪುಲವಾದ ಕ್ಷೇತ್ರಕಾರ್ಯ ನಡೆಸಿ ಅಧ್ಯಯನ ನಡೆಸಬೇಕಾಗಿದೆ.

**4. ಕರ್ನಾಟಕದಲ್ಲಿ**

ಕರ್ನಾಟಕದಲ್ಲಿ ಜಾನಪದ ಸಂಗ್ರಹ ಪ್ರಾರಂಭವಾದದ್ದೇ ಇತ್ತೀಚೆಗೆ. ಶಿಷ್ಟ ಸಾಹಿತ್ಯದಂತೆ ಅಖಂಡ ಬೆಳವಣಿಗೆಯ ಇತಿಹಾಸ ಇದಕ್ಕಿಲ್ಲ. ಆದರೆ ಅಖಂಡವಾದ ಪರಂಪರೆಯನ್ನು ಹೊಂದಿದೆ. 19ನೇ ಶತಮಾನದ ಪ್ರಾರಂಭದ ಹಂತದಲ್ಲಿ ಜನಪದ ಸಂಗ್ರಹ, ಸಂಪಾದನೆ, ಅಧ್ಯಯನ ಸಂಶೋಧನೆಗಳಿಂದ ತನ್ನ ದಿಕ್ಕು ದೆಸೆಗಳನ್ನು ಹಿಗ್ಗಿಸಿಕೊಂಡು ಬೆಳೆದು ನಿಂತಿದೆ. ಇದು ಮೌಖಿಕ ಸಾಹಿತ್ಯವಾಗಿರುವುದರಿಂದ ಕಾಲ ಕಾಲಕ್ಕೆ ಭಾಷೆಯ ಮತ್ತು ಪ್ರಾದೇಶಿಕ ಬದಲಾವಣೆಗಳಿಂದ ಅದು ಆಯಾ ಕಾಲಕ್ಕೆ ತಕ್ಕಂತೆ ಬದಲಾಗುತ್ತಾ ನಡೆದಿದೆ. ಮಾನಸಿಕ ವೇದನೆಯಿಂದ ಹೊರಳಾಡುವ ಜನಪದ ಕಾವ್ಯ ಯಾವ ಕಾಲದಲ್ಲಿ ರಚನೆಯಾಯಿತು ಎನ್ನುವುದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಜನರ ಬಾಯಿಯಿಂದ ಪರಂಪರಾಗತವಾಗಿ ಸಾಗಿ ಬಂದಿದೆ.

ಹೊಸಗನ್ನಡ ಸಾಹಿತ್ಯದ ಅರುಣೋದಯ ಪ್ರಾರಂಭವಾದದ್ದೇ ಪಾಶ್ಚಿಮಾತ್ಯರಿಂದ. ಜನಪದ ಕಾವ್ಯ ಕೂಡ ಅದರಿಂದ ಹೊರತಾಗಿಲ್ಲ. ತಮ್ಮ ಧರ್ಮ ಪ್ರಚಾರದ ಜೊತೆಗೆ ಹಳ್ಳಿಗಳಲ್ಲಿಯ ಜನಪದ ಸಂಸ್ಕೃತಿ, ಗೀತೆಗಳ ಸಂಗ್ರಹ ಕಾರ್ಯ ಕೈಗೊಂಡರು. ಜನಪದ ಸಾಹಿತ್ಯದ ವಿಶೇಷ ಎಂದರೆ ಪ್ರಾರಂಭದಿಂದ ಇತ್ತೀಚಿನವರೆಗೂ ಗೀತೆಗಳ ಸಂಗ್ರಹವೇ ಮೇಲುಗೈಯಾಗಿದೆ. ಜನಪದ ಸಾಹಿತ್ಯ ಗೀತ ಪ್ರಧಾನವಾದದ್ದರಿಂದ ಅದರದೇ ಸಿಂಹಪಾಲು ಎಂದು ಹೇಳಬಹುದು. ಇನ್ನುಳಿದ ಕಥೆ, ಗಾದೆ, ಒಗಟು ಅನೇಕ ಪ್ರಕಾರಗಳ ಸಂಗ್ರಹಕಾರ್ಯ ಇತ್ತಿತ್ತಲಾಗಿ ನಡೆದಿದೆ. ಉತ್ತರ ಭಾರತದಲ್ಲಿ ಬೀಸಿದ ಜಾನಪದ ಆಸಕ್ತಿ ದಕ್ಷಿಣಕ್ಕೂ ಪಸರಿಸಿಕೊಂಡಿತು. ಈ ಕ್ಷೇತ್ರಕ್ಕೆ ಮೊದಲು ಕಾಲಿರಿಸಿದವರು ಆಂಗ್ಲ ವಿದ್ವಾಂಸರು. 1803ರಲ್ಲಿ ಜಾನ್ ಲೇಡನ್ ಅವರು ಶ್ರೀರಂಗಪಟ್ಟಣದ ಕೆಡುಗಾಲ ಕುರಿತು ಕಥನ ಕಾವ್ಯವನ್ನು ಇಂಗ್ಲೀಷ್ ಭಾಷೆಗೆ ಅನುವಾದಿಸಿ ಆ ಗೀತೆಯ ಹಿರಿಮೆಯನ್ನು ಪರಿಚಯಿಸಿದ ಮೊದಲಿಗರು. ಮೋಗ್ಲಿಂಗ್ 1859ರಲ್ಲಿ "ಕನ್ನಡ ಗಾದೆಗಳು" ಎಂಬ 151 ಪುಟಗಳ ಕೃತಿಯನ್ನು ಹೊರ ತಂದದ್ದು ಮತ್ತೊಂದು ಮಹತ್ವದ ಕಾರ್ಯವಾಗಿದೆ.[16] 1871ರಲ್ಲಿ ಚಾರ್ಲಸ್ ಇ ಗೋವರ್ ಎಂಬ ವಿದ್ವಾಂಸರು "ದಕ್ಷಿಣ ಭಾರತದ ಜನಪದ ಗೀತೆಗಳು" (The Folk songs of Southern India) ಎಂಬ ಬಹು ಮೌಲಿಕವಾದ ಕೃತಿ ಹೊರತಂದರು. ಇವರು ಅನೇಕ ದಕ್ಷಿಣ ದ್ರಾವಿಡ ಭಾಷೆಗಳ ಗೀತೆಗಳನ್ನು ಸಂಗ್ರಹಿಸಿ "Canarese Folk songs" ಎಂಬ ತಲೆ ಬರಹದಲ್ಲಿ ಪರಿಚಯಿಸಿದ್ದಾರೆ. ಜನಪದ ಗೀತೆಗಳು ಕಂಠಸ್ಥ ಪರಂಪರೆಯ ಸ್ವರೂಪ ಪಡೆದಿರುವುದರಿಂದ ಹಾಡುಗಾರರನ್ನು ಹುಡುಕುತ್ತಾ ಅಲೆಯಲೇಬೇಕು.

ಜಾನಪದ ಸಂಗ್ರಹಕ್ಕೆ ವಿಶಿಷ್ಟ ರೂಪ ಕೊಟ್ಟವರು ಫ್ಲೀಟರು. 1885ರಲ್ಲಿ ಅವರು ಸಂಗ್ರಹಿಸಿದ ಐತಿಹಾಸಿಕ ಕಥನ ಗೀತೆಗಳು ಅವರ ಪ್ರಾಮಾಣಿಕ ಕ್ಷೇತ್ರಕಾರ್ಯದ ಪರಿಶ್ರಮವನ್ನು ತಿಳಿಸುತ್ತದೆ. ಅಷ್ಟೇ ಅಲ್ಲ, ಆ ಕ್ಷೇತ್ರಕ್ಕೆ ಹೊಸ ಸ್ವರೂಪವನ್ನು ಹಾಕಿ ಕೊಟ್ಟ ಮೊದಲಿಗರವರು. ಇಲ್ಲಿ ಫ್ಲೀಟರು ಜನಪದ ಹಾಡುಗಾರಿಕೆಗೆ ಬಳಸುವ ಅನೇಕ ವಾದ್ಯ ಪರಿಕರಗಳನ್ನು ಗುರುತಿಸಿರುವುದು ಗಮನಾರ್ಹವಾಗಿದೆ.

ಶ್ರೀ ಶಂಕರನಾರಾಯಣ ಕೂಡ್ಲಿಕರ್ ಅವರು 1908ರಲ್ಲಿ ಪ್ರಕಟಿಸಿದ "ಕನ್ನಡ ಆರತಿಗಳ ಸಂಗ್ರಹ"[17] ಹೆಣ್ಣುಮಕ್ಕಳಿಗೆ ಸಂಬಂಧಿಸಿದ ಹಾಡುಗಳನ್ನು ಸಂಗ್ರಹಿಸಿದ ಮೊದಲ ಸಾಧನೆ ಎನ್ನಬೇಕು. ಜನಪದ ಸಂಗ್ರಹಣೆಯ ಬಗ್ಗೆ ಜನರಲ್ಲಿ ಆಸಕ್ತಿಯನ್ನು ಮೂಡಿಸುವಲ್ಲಿ ಮಾಸ್ತಿ, ಬೇಂದ್ರೆ, ಆನಂದಕಂದ, ಮಧುರಚೆನ್ನ, ಪಿ. ಧೂಲಾ, ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ, ದೇವುಡು ಗುಂಡಪ್ಪ, ಹಾ.ಮಾ.ನಾ., ಗೋರುರು ಮುಂತಾದವರ ಕಾರ್ಯ ಸ್ತುತ್ಯವಾಗಿದೆ. ಈ ದಿಶೆಯಲ್ಲಿ ಜನಪದ ಸಂಗ್ರಹ ಕಾರ್ಯಕ್ಕೆ ಮೊದಲು ಹುಟ್ಟು ಹಾಕಿದವರು ಉತ್ತರ ಕರ್ನಾಟಕದ ಹಲಸಂಗಿ ಗೆಳೆಯರು. 1923ರಲ್ಲಿ ವಿಜಾಪುರದಲ್ಲಿ ನಡೆದ 9ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಧುರಚೆನ್ನರು "ಬೀಸುವ ಕಲ್ಲಿನ ಹಾಡು" ಪ್ರಬಂಧ ಮಂಡಿಸಿದರೆ, ಪಿ.ಧೂಲಾ ಅವರು "ಲಾವಣಿಯ ಲಾವಣ್ಯ" ಎಂಬ ಪ್ರಬಂಧ ಮಂಡಿಸಿದ್ದರು.[18] ನಂತರ ಮಧುರಚೆನ್ನರ "ಹಳ್ಳಿಯ ಹಾಡುಗಳು" ಎಂಬ ಲೇಖನ 1924ರಲ್ಲಿ ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾದದ್ದನ್ನು ಇಲ್ಲಿ ಸ್ಮರಿಸಬಹುದು. 1925ರಲ್ಲಿ ಅದೇ ಪತ್ರಿಕೆಯಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರ "ಕನ್ನಡ ನಾಡಿನ ಲಾವಣಿ ಸಾಂಗತ್ಯ"[19] ಎಂಬ ಲೇಖನ ಬಹು ವಿಸ್ತಾರವಾದುದಷ್ಟೇ ಅಲ್ಲ ಬಹು ಮಹತ್ವ ಪಡೆದಿದೆ. ಐತಿಹಾಸಿಕ ಕಥನ ಕಾವ್ಯಗಳು, "ಅರ್ಜುನ ಜೋಗಿಯ ಹಾಡು" ಸಂಗ್ರಹಿಸಿ ಪರಿಚಯಿಸಿದ ಖ್ಯಾತಿ ಇವರಿಗೆ ಸಲ್ಲುತ್ತದೆ. 1931ರಲ್ಲಿ ಸಂಗ್ರಹಿಸಿ ಪ್ರಕಟಿಸಿದ ಹಲಸಂಗಿ ಗೆಳೆಯರು "ಗರತಿಯ ಹಾಡು" ಜನಪದ ಸಾಹಿತ್ಯ ಜಗತ್ತಿನ ಶಿಖರದಂತಿದೆ. ಗ್ರಾಮೀಣ ಜನತೆಯ ಸಮಗ್ರ ಸಂಸ್ಕೃತಿಯನ್ನು ಬಿಂಬಿಸುವ ಇಲ್ಲಿಯ ತ್ರಿಪದಿಗಳು ಗೀತ ಸಾಹಿತ್ಯದ ಅಧ್ಯಯನಕ್ಕೆ ತೊಡಗುವವರಿಗೆ ಅತಿ ಮುಖ್ಯವಾದವುಗಳು. 1933ರಲ್ಲಿ ಪ್ರಕಟಿಸಿದ "ಜೀವನ ಸಂಗೀತ" ಗೆಳೆಯರ ಗುಂಪಿನ ಇನ್ನೊಂದು ದಾಖಲೆ: ಲಾವಣಿ, ಕಥನ ಕವನಗಳನ್ನು ಇಲ್ಲಿ ಸಂಗ್ರಹಕಾರರು ಸೇರಿಸಿದ್ದಾರೆ.

ಬಿ. ರಂಗ ಸ್ವಾಮಿಯವರ "ಹುಟ್ಟಿದ ಹಳ್ಳಿ, ಹಳ್ಳಿಯ ಹಾಡು" (1933) ಗೆಳೆಯರ ಗುಂಪಿನ "ಮಲ್ಲಿಗೆ ದಂಡೆ" (1935) ಅನಂತ ರಂಗಾಚಾರ್ಯರ "ಮಾನೌಮಿಯ ಚೌಪದ" (1940) ಮತಿಘಟ್ಟ ಕೃಷ್ಣಮೂರ್ತಿ ಅವರ 'ನಾಡಪದಗಳು' (1943) ಮುಂತಾದ ಗೀತ ಪ್ರಧಾನವಾದ ಸಂಪಾದನ ಸಂಗ್ರಹ ಕಾರ್ಯ ಪ್ರಗತಿಯನ್ನು ಕಂಡಿತು. ಜೊತೆಗೆ ಜನಪದದ ಅನೇಕ ಪ್ರಕಾರಗಳ ಕುರಿತು ಕೆಲಸ ನಡೆಯಿತು. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಪಿ.ಹೆಚ್.ಡಿ. ಪ್ರಬಂಧಗಳು ಹೊರಬಂದವು. ಡಾ. ಬಿ.ಎಸ್.ಗದ್ದಗಿಮಠರ "ಕನ್ನಡ ಜಾನಪದ ಗೀತೆಗಳು" (1955) ಜಿ.ಶಂ.ಪ. ಅವರ "ದಕ್ಷಿಣ ಕನ್ನಡ ಜನಪದ ಕಾವ್ಯ ಪ್ರಕಾರಗಳು" (1979), ಡಾ. ಎನ್.ಆರ್. ನಾಯಕ

ಅವರ "ಕಾರವಾರ ಜಿಲ್ಲೆಯ ಜಾನಪದ ಗೀತೆಗಳು" (1982) ತಪಸ್ವಿನಿ ಕುಮಾರ ಅವರ "ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ" ಮುಂತಾದವು ಈ ನಿಟ್ಟಿನಲ್ಲಿ ಹೊರಬಂದ ಮಹಾಪ್ರಬಂಧಗಳಾಗಿವೆ.

ಕನ್ನಡದಲ್ಲೂ ಜನಪದ ಕಾವ್ಯಗಳಿವೆ ಎಂಬುವುದನ್ನು ಮೊದಲ ಬಾರಿಗೆ ಗುರುತಿಸಿ ಅಧ್ಯಯನಕ್ಕೆ ಅಳವಡಿಸಿದವರು ಡಾ. ಜಿ.ಶಂ.ಪರಮಶಿವಯ್ಯನವರು, ತಮ್ಮ "ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು" ಎಂಬ ಮಹಾ ಪ್ರಬಂಧದಲ್ಲಿ "ಮಲೆ ಮಾದೇಶ್ವರ", "ಜುಂಜಪ್ಪ", "ಮಂಟೆಸ್ವಾಮಿ", "ಸವದತ್ತಿ ಎಲ್ಲಮ್ಮ", "ಮೈಲಾರ ಲಿಂಗ" ಮುಂತಾದ ಧಾರ್ಮಿಕ–ಲೌಕಿಕ ಕಾವ್ಯಗಳನ್ನು ಪರಿಚಯಿಸಿದ್ದಾರೆ. ಅವುಗಳ ಇತಿಮಿತಿಗಳನ್ನೂ ಸ್ಥೂಲವಾಗಿ ವಿಮರ್ಶೆಗೆ ಒಳಗು ಮಾಡಿದ್ದಾರೆ.

ಡಾ. ಬಿ.ಎಸ್. ಸ್ವಾಮಿಯವರು 'ಮಲೆ ಮಾದೇಶ್ವರ' ಮತ್ತು 'ಮಂಟೇಸ್ವಾಮಿ' (1993), ಕಾವ್ಯಗಳ ಕುರಿತು ತೌಲನಿಕ ಚಿಂತನೆ ನಡೆಸಿದರೆ; ಡಾ. ಪಿ.ಕೆ. ರಾಜಶೇಖರ ಅವರು ವ್ಯಾಪಕವಾದ ಕ್ಷೇತ್ರ ಕಾರ್ಯ ನಡೆಸಿ ಮಲೆ ಮಾದೇಶ್ವರ ಮಹಾಸಂಪುಟಗಳನ್ನು ಹೊರತಂದಿದ್ದಾರೆ. ಡಾ. ವಾಮನ ನಂದಾವರರವರ ಮಹಾ ಪ್ರಬಂಧ ಕೋಟಿ ಚನ್ನಯ್ಯ (1994) ಮತ್ತು ಸ್ಥಳೀಯ ಅವಳಿ ವೀರ ತುಳು ಜನಪದ ಮಹಾಕಾವ್ಯ 'ಅವಳಿ ಆರಾಧನೆ–ಅವಳಿತನ–ಪುರಾಣ ಮತ್ತು ವಾಸ್ತವತೆ'[20] ಜೀವನ ಚಕ್ರವನ್ನು ನಿರೂಪಿಸುವ ಆರಾಧನೆ ಪಠ್ಯ ಮತ್ತು ಸಂದರ್ಭ ಪ್ರತಿಭಟನೆ, ಹೋರಾಟಗಳು ಇತ್ಯಾದಿಗಳನ್ನು ಅಂತರರಾಷ್ಟ್ರೀಯ ಜಾನಪದ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಿದ್ದಾರೆ. ರಾಗೌ ಮತ್ತು ಪಿ.ಕೆ. ರಾಜಶೇಖರ ಇಬ್ಬರೂ ಒಟ್ಟಾಗಿ ಸೇರಿ ಪ್ರಕಟಿಸಿರುವ 'ಜನಪದ ರಾಮಾಯಣ', 'ಜನಪದ ಮಹಾಭಾರತ', 'ಜನಪದ ಬಸವ ಪುರಾಣ' ಹೊರ ತಂದಿದ್ದಾರೆ. 1990ರಲ್ಲಿ ವಿವೇಕ ರೈಯವರು ನಡೆಸಿದ Indian Oral Epics ಎಂಬ ವಿಚಾರ ಸಂಕೀರ್ಣ ಜನಪದ ಕಾವ್ಯಗಳ ಗಂಭೀರ ವಿಚಾರಗಳಿಗೆ ಸಹಾಯಕವಾಗಿದೆ. ಇದರಲ್ಲಿ ಲೌರಿ ಹೋಂಕೋ, ಫ್ಲೀಟರ್ ಕ್ಲಾಸ್, ಬ್ಲಾಕ್ ಬರ್ನ್ ಮುಂತಾದ ಪಾಶ್ಚಾತ್ಯ ವಿದ್ವಾಂಸರು ಭಾಗವಹಿಸಿ ಚರ್ಚಿಸಿದ್ದು ವಿಶೇಷವಾಗಿದೆ. (ಜನಪದ ಮಹಾಕಾವ್ಯ ತೀ.ನಂ. ಶಂಕರ ನಾರಾಯಣ ಪು–25, 1996) ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಭಾರತಿ 1996ರಲ್ಲಿ ನಡೆಸಿದ "ಕರ್ನಾಟಕ ಜನಪದ ಮಹಾಕಾವ್ಯಗಳು, ವಿಚಾರ ಸಂಕಿರಣ ಜನಪದ ಕಾವ್ಯಗಳ ಅಧ್ಯಯನದಲ್ಲಿ ಅತಿ ಮಹತ್ವದ್ದು (ಅದೇ 1996 ಪು–26) ಹೂವಿನ ಹಡಗಲಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವು 1995ರಲ್ಲಿ ಅಕಾಡೆಮಿ ಸಹಯೋಗದೊಂದಿಗೆ ವಿಚಾರ ಸಂಕೀರ್ಣ ನಡೆಸಿತು. ಅಲ್ಲಿ ಶಿಷ್ಟ ಮತ್ತು ಜನಪದ ಮಹಾಕಾವ್ಯಗಳ ಪರಸ್ಪರ ಸಂಬಂಧ ಸ್ವರೂಪಗಳ ಬಗ್ಗೆ ಕೆಲವು ಮೌಲಿಕ ಪ್ರಬಂಧಗಳು ಮಂಡಿತವಾದವು. (ಅದೇ 1996 ಪು–25) ಕರ್ನಾಟಕದಲ್ಲಿ ಜನಪದ ಮಹಾಕಾವ್ಯಗಳ ಕುರಿತು ಪ್ರೌಢವಾದ ನೆಲೆಯಲ್ಲಿ ಮಾಡಿದ ಅಧ್ಯಯನ ಇದಾಗಿದೆ.

ಕನ್ನಡ ವಿಶ್ವವಿದ್ಯಾಲಯ ಹಂಪಿ ಇತ್ತಿತ್ತಲಾಗಿ ಬುಡಕಟ್ಟು ಮಹಾಕಾವ್ಯ ಮಾಲೆಯ ಅಡಿಯಲ್ಲಿ 'ಮಾಳಿಂಗರಾಯನ ಕಾವ್ಯ' (1999), 'ಮೈಲಾರಲಿಂಗನ ಕಾವ್ಯ', 'ಕೃಷ್ಣ ಗೊಲ್ಲರ ಕಥನ ಕಾವ್ಯಗಳು', 'ತುಳು ಪಾಡ್ದನ ಸಂಪುಟ', 'ಮಂಟೇ ಸ್ವಾಮಿ ಕಾವ್ಯ', 'ಕುಮಾರ ರಾಮ' ಮತ್ತು 'ಕೃಷ್ಣ ಗೊಲ್ಲರ ಕಾವ್ಯ', 'ಜುಂಜಪ್ಪ', 'ಮಲೇ ಮಾದೇಶ್ವರ', 'ಸಿರಿಪಾಡ್ದನ' (ತುಳು) 'ಗೊಂಡರ ರಾಮಾಯಣ', 'ಸ್ವಾಸಿ ಚೆನ್ನಮ್ಮನ ಕಾವ್ಯ' ಮುಂತಾದ ಬಹು ಮೌಲಿಕವಾದ ಪ್ರಕಟಣೆಗಳನ್ನು ಹೊರತಂದಿದೆ. ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟವಾದ "ಜನಪದ ಹಾಲುಮತ ಮಹಾಕಾವ್ಯ" ವಿಭಿನ್ನವಾದ ಹತ್ತಾರು ಕತೆಗಳು ಒಂದಕ್ಕೊಂದು ಕೊಂಡಿಯಂತೆ ಹೆಣೆದುಕೊಂಡ ಅಖಂಡ ಪದ್ಯ ರೂಪದಿಂದ ರೂಪಗೊಂಡ ಕಾವ್ಯವಾಗಿದೆ. ಇತ್ತಿತ್ತಲಾಗಿ ಈ ನೆಲೆಯಲ್ಲಿ ಹೊಸ ಹೊಸ ಕಾವ್ಯಗಳ ಶೋಧನೆ, ಅಧ್ಯಯನ, ಸಂಪಾದನಾ ಕಾರ್ಯ ನಡೆಯುತ್ತಿರುವುದು ಗಮನಾರ್ಹವಾಗಿದೆ.

**5. ಹೈದ್ರಾಬಾದ ಕರ್ನಾಟಕದಲ್ಲಿ:**

ಕರ್ನಾಟಕದ ಬೇರೆ ಬೇರೆ ಪ್ರದೇಶಗಳಿಗೆ ಹೋಲಿಸಿ ನೋಡಿದರೆ ಹೈದ್ರಾಬಾದ ಕರ್ನಾಟಕ ಜಾನಪದ ಅಧ್ಯಯನದಿಂದ ವಂಚಿತವಾದ ಪ್ರದೇಶ. ಸುಮಾರು ವರ್ಷಗಳ ಕಾಲ ಪರಕೀಯ ದಾಳಿಗೆ ತುತ್ತಾಗಿ ಅನ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದ ಈ ಭಾಗದಲ್ಲಿ ಜಾನಪದ ಅಧ್ಯಯನಗಳು ನಡೆಯದೆ ಇರುವುದು ದುರ್ದೈವ. ಬಹುಶಃ ಈ ಕಾರಣಕ್ಕಾಗಿಯೇ ಈ ಭಾಗದಲ್ಲಿ ಅಧ್ಯಯನ ಮಾಡುವ ಹಿರಿಯ ತಲೆಮಾರಿನ ಸಂಶೋಧಕರಾಗಲಿ ಸಂಘ ಸಂಸ್ಥೆಗಳಾಗಲಿ ಇಲ್ಲಿ ಕಾಣಬರುವುದಿಲ್ಲ. ಈ ಪ್ರದೇಶದಲ್ಲಿ ಜಾನಪದ ಸಾಹಿತ್ಯ ವಿಪುಲವಾಗಿದ್ದರೂ ಅದನ್ನು ಶಾಸ್ತ್ರೀಯವಾಗಿ ಕ್ಷೇತ್ರಕಾರ್ಯಕ್ಕೆ ಅಳವಡಿಸಿ ಸಂಗ್ರಹಿಸುವ ಅಧ್ಯಯನ ಮಾಡುವ ಕಾರ್ಯ ಇನ್ನೂ ನಡೆಯಬೇಕಿದೆ.

ಜಾನಪದ ಸಂಗ್ರಹ, ಸಂಶೋಧನೆ ಕಾರ್ಯ ನಾಡಿನುದ್ದಕ್ಕೂ ನಡೆದಾಗ ಈ ಪ್ರದೇಶದತ್ತ ಹೊರಳಿ ನೋಡಬೇಕಾಯಿತು. ಈ ಭಾಗದ ಜನತೆಗೆ ಜಾನಪದದ ಬಗ್ಗೆ ಅರಿವು ಮೂಡಿದ್ದು ಕರ್ನಾಟಕ ವಿಶ್ವವಿದ್ಯಾಲಯವು ಸ್ನಾತಕೋತ್ತರ ಪದವಿ ಪಠ್ಯ ಕ್ರಮದಲ್ಲಿ ಅಳವಡಿಸಿದ ಜನಪದ ಪತ್ರಿಕೆಯಿಂದ ಎಂದರೆ ತಪ್ಪಾಗದು. ನಂತರ 1970ರಲ್ಲಿ ಕಲಬುರ್ಗಿ ಸ್ನಾತಕೋತ್ತರ ಕೇಂದ್ರ ಪ್ರಾರಂಭವಾಗಿ ಆಮೇಲೆ ಸ್ವತಂತ್ರ ವಿಶ್ವವಿದ್ಯಾಲಯವಾದಾಗ ಈ ಕಡೆಗೆ ಹೆಚ್ಚಿನ ಆಸಕ್ತಿ ವಹಿಸಲು ಕಾರಣವಾಯಿತು.

ಈ ಕೇಂದ್ರದಲ್ಲಿ ಕನ್ನಡ ಅಧ್ಯಯನ ಸಂಸ್ಥೆಗೆ 1972ರಲ್ಲಿ ಮುಖ್ಯಸ್ಥರಾಗಿ ಬಂದ ಡಾ. ಬಿ.ಬಿ. ಹೆಂಡಿ ಈ ಭಾಗದ ಜಾನಪದದೆಡೆಗೆ ವಿಶೇಷ ಗಮನ ಸೆಳೆದರು. ಇಲ್ಲಿಂದಲೇ ಹೈದ್ರಾಬಾದ ಕರ್ನಾಟಕದ ಜಾನಪದದ ಕೆಲಸಗಳು ವ್ಯಾಪಕವಾಗಿ ನಡೆದವು. ಮೂಲತಃ ವಿದ್ವಾಂಸರಾದ ಹೆಂಡಿಯವರ ಪ್ರಭಾವ, ಪ್ರೇರಣೆ, ಪ್ರೋತ್ಸಾಹದಿಂದ ಅನೇಕ ವಿದ್ವಾಂಸರು ಈ ಪ್ರದೇಶದಲ್ಲಿ ಅಧ್ಯಯನಕ್ಕೆ ತೊಡಗಿದರು.

ನಾಡಿನ ಹೆಸರಾಂತ ಜಾನಪದ ವಿದ್ವಾಂಸರನ್ನು ಕರೆಸಿ ಅವರು ಅನೇಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ವಿಶ್ವವಿದ್ಯಾಲಯದ ಧನಸಹಾಯ ಆಯೋಗದಿಂದ ಜನಪದ ಕಥೆ, ಹಾಡುಗಳು, ಸಂಗ್ರಹ, ಸಂಪಾದನೆ, ಪ್ರಕಟಣೆ ಕಾರ್ಯಗಳು ಪ್ರಾರಂಭಿಸಿದರು. ಡಾ. ಹೆಂಡಿಯವರ ಮಾರ್ಗದರ್ಶನದಲ್ಲಿ ಡಾ. ಎಂ.ಎಸ್. ಲಠ್ಠೆ, ಡಾ. ಮ.ಗು. ಬಿರಾದಾರ, ಡಾ. ಬಿ.ವ್ಹಿ. ಮಲ್ಲಾಪೂರ, ಶಂಕರಗೌಡ ಬಿರಾದಾರ, ಡಾ. ಬಿ.ಎಸ್. ಪೊಲೀಸ್ ಪಾಟೀಲ್, ಡಾ. ವೀರಣ್ಣ ದಂಡೆ ಹಾಗೂ ಸಂಗಯ್ಯ ಹಿರೇಮಠ, ಸಹಾಯಕ ಸಂಶೋಧಕರಾಗಿ ಕೆಲಸ ಪ್ರಾರಂಭಿಸಿದರು. ಡಾ. ಹೆಂಡಿಯವರ ಸಂಪಾದಕತ್ವದಲ್ಲಿ ಈ ಭಾಗದ 'ಆಯ್ದ ಜನಪದ ಕಥನ ಗೀತೆಗಳು', 'ಹರದೇಶಿ ನಾಗೇಶಿ', 'ನೂರೊಂದು ಜನಪದ ಕಥೆಗಳು' ಮತ್ತು 'ಯಯಾತಿ' ಅತಿ ಮುಖ್ಯವಾದ ಮೌಲಿಕ ಪ್ರಕಟಣೆಗಳಾಗಿವೆ.

1978ರಲ್ಲಿ ಅಖಿಲ ಕರ್ನಾಟಕ ಐದನೆಯ ಜಾನಪದ ಸಮ್ಮೇಳನ ಸ್ನಾತಕೋತ್ತರ ಕನ್ನಡ ವಿಭಾಗದ ಸಹಯೋಗದಲ್ಲಿ ನಡೆಯಿತು. ಇದರಿಂದ ನಾಡಿನ ವಿದ್ವಾಂಸರ ವಿಚಾರ ವಿಮರ್ಶೆಗಳ ಪ್ರೇರಣೆಯಿಂದ ಜಾನಪದ ಕ್ಷೇತ್ರದ ಆಸಕ್ತಿ ಮತ್ತಷ್ಟು ಹೆಚ್ಚಾಯಿತು. 1981–82ನೇ ಸಾಲಿನಲ್ಲಿ ಪ್ರತ್ಯೇಕವಾದ ಕನ್ನಡ ಮತ್ತು ಜಾನಪದ ಅಧ್ಯಯನ ಪ್ರಾರಂಭಿಸಿತು. ಅನೇಕ ವಿದ್ಯಾರ್ಥಿಗಳ ಆಸಕ್ತಿಯ ಕ್ಷೇತ್ರವಾಗಿ ಬೆಳೆಯಿತು. ಸಂಶೋಧಕರಿಗೆ ಜಾನಪದ ಸಮಸ್ಯೆಗಳ ಕಡೆಗೆ ಹೆಚ್ಚಿನ ಗಮನ ಸೆಳೆಯಿತು.

1975ರಲ್ಲಿ ಕಲಬುರ್ಗಿಯಲ್ಲಿ ನಡೆದ ರಾಜ್ಯ ಮಟ್ಟದ ಲಾವಣಿ ಮತ್ತು

ಗೀಗೀ ಮೇಳ ಬಹು ವಿಶೇಷವಾದದ್ದು. ನಾಡಿನ ಹೆಸರಾಂತ ಕಲಾಮೇಳಗಳು ಇಲ್ಲಿ ಭಾಗವಹಿಸಿದ್ದವು. ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಎಚ್.ಎಲ್. ನಾಗೇಗೌಡರು, ದಿವಂಗತ ಬಿ.ಡಿ. ಜತ್ತಿ, ಸಿಂಪಿ ಲಿಂಗಣ್ಣ, ಶಾಂತರಸ, ಕೆ.ಆರ್. ಲಿಂಗಪ್ಪ, ಮುದೇನೂರ ಸಂಗಣ್ಣ ಅನೇಕ ಹಿರಿಯ ತಲೆಮಾರಿನ ಜಆನಪದ ವಿದ್ವಾಂಸರು ಮೌಲಿಕವಾದ ವಿಷಯಗಳನ್ನು ಪರಿಚಯಿಸಿದರು. ಈ ಸಮ್ಮೇಳನದ ನಂತರ ಇಟ್ಟ ದಿಟ್ಟ ಹೆಜ್ಜೆ ಎಂದರೆ, ಪ್ರತಿ ಜಿಲ್ಲೆಗಳಲ್ಲಿಯೂ 1976ರಿಂದ ಮಾಹಿತಿ ಸಂಗ್ರಹ ನಡೆಯಿತು.

ನಾಡಿನ ಬೇರೆ ಬೇರೆ ಪ್ರದೇಶಗಳಿಂದ ಈ ಅಧ್ಯಯನ ಕೇಂದ್ರಕ್ಕೆ ಅಧ್ಯಾಪಕರಾಗಿ ಬಂದ ನಂತರ ಇಲ್ಲಿಯ ಜಾನಪದ ಸಂಗ್ರಹ ಆಗದೇ ಇರುವುದರ ಕೊರತೆ ಕಂಡು, ಈ ನಿಟ್ಟಿನಲ್ಲಿ ಅಧ್ಯಯನಕ್ಕೆ ಮುಂದಾದರು. ಈ ಸಾಲಿನಲ್ಲಿ ಪ್ರಮುಖರಾದ ಡಾ. ಬಿ.ಬಿ. ಹೆಂಡಿ; ಡಾ. ಎಂ.ಎಸ್. ಲಠ್ಠೆ, ಡಾ. ಸಂಗಮೇಶ ಸೌದತ್ತಿಮಠ, ಡಾ. ಬಿ.ಎಸ್. ಪೊಲೀಸ್ ಪಾಟೀಲ್, ಡಾ. ವೀರಣ್ಣ ದಂಡೆ, ಡಾ. ಚನ್ನಣ್ಣ ವಾಲೀಕಾರ, ಡಾ. ಮ.ಗು. ಬಿರಾದಾರ, ಡಾ. ಪಿ.ಕೆ. ಖಂಡೋಬಾ, ಡಾ. ಡಿ.ಬಿ. ನಆಯಕ, ಡಾ. ಹೆಚ್.ಟಿ.ಪೋತೆ, ಡಾ. ಟಿ.ಎಂ. ಭಾಸ್ಕರ, ಡಾ. ಸೋಮಶೇಖರ ನುಚ್ಚಾಳ ಮುಂತಾದವರು ಪ್ರಮುಖರಾಗಿದ್ದಾರೆ.

ಹೈದ್ರಾಬಾದ ಕರ್ನಾಟಕದ ಜಾನಪದ ಸಾಹಿತ್ಯದ ಪ್ರತಿನಿಧಿಯಾಗಿ ಕೆಲಸ ಮಾಡಿದ ಲಠ್ಠೆಯವರ ಸಾಧನೆ ಹಿರಿದಾದದ್ದು. ಅವರ "ಉತ್ತರ ಕರ್ನಾಟಕದ ಒಡಪುಗಳು" (1974) ಉತ್ತರ ಕರ್ನಾಟಕದ ಹಂತಿ ಹಾಡುಗಳು (1975) 'ಚುಕ್ಕೋಳ ಪದಗಳು' (1976), 'ಜನಪದ ಕವಿ ಚರಿತ್ರೆ' (1979) 'ಬಯಲಾಟದ ಸಾರಥಿ' (1978) 'ಜನಪದ ನುಡಿಗಟ್ಟು' (1981) ಮುಂತಾದವು ಈ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು. ಅವರ ಸಣ್ಣಾಟ ಮತ್ತು ದೊಡ್ಡಾಟದ ಸಂಗ್ರಹಗಳೂ ಹೊರಬಂದಿವೆ. ಲಠ್ಠೆಯವರ ಈ ಜಾನಪದ ಸಾಹಿತ್ಯದ ಮೌಲಿಕವಾದ ಕೃತಿಗಳು ಬಹುಬೇಗ ಪ್ರಭಾವ ಬೀರಿದವು. ಅದು ಅವರಿಗೆ ಇನ್ನಷ್ಟು ಆಸಕ್ತಿಯ ಕ್ಷೇತ್ರವಾಗಿ ತೊಡಗಿಸಿಕೊಳ್ಳಲು ಪ್ರೇರಣೆಯಾಯಿತು.

ಡಾ. ಸಂಗಮೇಶ ಸೌದತ್ತಿಮಠರ 'ಜಾನಪದ ಭಾಷಾ ಸಮೀಕ್ಷೆ' (1985) ಡಾ. ಬಸವರಾಜ ಪೊಲೀಸ್ ಪಾಟೀಲ್‌ರ 'ಹೈದ್ರಾಬಾದ ಕರ್ನಾಟಕ ಜನಪದ ಸಾಹಿತ್ಯ', 'ಜಾನಪದ ಭಾರತಿ' (1985), 'ಜಾನಪದ ಸಿರಿ' (1990), ಡಾ. ಎಂ.ಜಿ. ಬಿರಾದಾರ ಅವರ 'ಜಾನಪದ ಸಮಾಲೋಕನ' (1981), 'ಜಾನಪದ ಜೀವಾಳ' (1987), ಡಾ. ಶಶಿಕಲಾ ಮೊಳ್ದಿ ಅವರ 'ಹರದೆಯರ ಹಾಡುಗಳು' (1977), 'ಜಾಜದ ಹಾಡುಗಳು' (1989) ಹೈದ್ರಾಬಾದ ಕರ್ನಾಟಕದ ಇತರ ಕೊಡುಗೆಗಳು. ಡಾ. ವೀರಣ್ಣ ದಂಡೆಯವರು ಇತ್ತೀಚಿನ ಜಾನಪದ ಕ್ಷೇತ್ರದಲ್ಲಿ ಚಿಂತನೆ ಮಾಡುವ ತರುಣ ವಿದ್ವಾಂಸರಾಗಿದ್ದಾರೆ. ಅವರ 'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು' ಮೌಲಿಕವಾದ ಮಹಾಪ್ರಬಂಧವಾಗಿದೆ. ಆರು ಲೇಖನಗಳ 'ಜನಪದ ಕಥೆ ಮತ್ತು ತಂತ್ರ' (1981), 'ಜನಪದ ಕಾವ್ಯ ಮೀಮಾಂಸೆ' (1982), 'ಆಯ್ದ ಗಾದೆಗಳು ಹಾಗೂ ಒಗಟುಗಳು' (1985), 1986ರಲ್ಲಿ ಎರಡು ಗೀತರೂಪಕಗಳನ್ನು ಹೊತ್ತ 'ಬೀದಿ ಬಯಲಾಟಗಳು' ಮುಂತಾದವು ಪ್ರಕಟಿಸಿದ್ದಾರೆ. 24 ಲೇಖನಗಳ 'ಕನ್ನಡ ಜಾನಪದ ಪ್ರಜ್ಞೆ' 1991) 'ಜನಪದ ವಿಮರ್ಶೆಯ ಪ್ರಥಮ ವಿಮರ್ಶೆ' ಯನ್ನೊಳಗೊಂಡಿದೆ. ಸಿದ್ದಪ್ಪ ಮೇಟಿಯವರು ಹಾಡಿದ 'ಜನಪದ ಹಾಲುಮತ ಮಹಾಕಾವ್ಯ' (2000) ದಂಡೆಯವರ ಬೃಹತ್ ಸಾಧನೆಯ ಸಂಪಾದನಾ ಕೃತಿಯಾಗಿದೆ. ಈ ಭಾಗದಲ್ಲಿ ಜನಪದ ಕಾವ್ಯಗಳ ಕುರಿತ ಮೊದಲ ಚಿಂತನೆ ಮಾಡಿದ ವಿದ್ವಾಂಸರಲ್ಲಿ ಅವರು ಮೊದಲಿಗ ಎಂದರೆ ತಪ್ಪಾಗಲಿಕ್ಕಿಲ್ಲ.

ಡಾ. ಚನ್ನಣ್ಣ ವಾಲಿಕಾರರು ಬಂಡಾಯದ ನೆಲೆಯಿಂದ ಜನಪದ ಅಧ್ಯಯನ ನಡೆಸಿದವರು. ಅವರ 'ಹೈದ್ರಾಬಾದ ಕರ್ನಾಟಕದ ಗ್ರಾಮದೇವತೆಗಳು' ಗಮನಾರ್ಹ ಕೃತಿಯಾಗಿದೆ. 'ಗುಲಬರ್ಗಾ ಜಿಲ್ಲೆಯ ಮೊಹರಂ ಪದಗಳು' (1983), 'ಗುಲಬರ್ಗಾ ಜಿಲ್ಲೆಯ ತ್ರಿಪದಿಗಳು' ಜನಪದ ಹಾಡುಗಳ ಸಂಗ್ರಹವಾಗಿವೆ. 'ಒಂದು ಗ್ರಾಮದ ಜಾನಪದೀಯ ಅಧ್ಯಯನ' (1991) ಅವರ ಸಂಶೋಧನ ಕೃತಿಯಾಗಿದೆ. ಡಾ. ಸೋಮಶೇಖರ ನುಚ್ಚಾಳವರ 'ಬೀದರ ಜಿಲ್ಲೆಯ ಕೋಲಾಟದ ಪದಗಳು', ಡಾ. ಎಚ್.ಟಿ. ಪೋತೆಯವರ ' ಹೈದ್ರಾಬಾದ ಕರ್ನಾಟಕದ ಜನಪದ ಕಲೆಗಳು' ಮತ್ತು ಹೈದ್ರಾಬಾದ ಕರ್ನಾಟಕದ ಪ್ರದರ್ಶನ ವಾದ್ಯಗಳು' ಅವರ ಸಂಶೋಧನ ಪ್ರಬಂಧಗಳಾಗಿವೆ. ಭಂಡೆ ವೈಜನಾಥ ಅವರ 'ಬೀದರ ಜಿಲ್ಲೆಯ ಸ್ಥಳ ನಾಮಗಳು', ಡಾ. ಡಿ.ಬಿ. ನಾಯಕರ 'ಉತ್ತರ ಕರ್ನಾಟಕದ ಲಂಬಾಣಿ ಜನಪದ ಸಾಹಿತ್ಯ: ಒಂದು ಅಧ್ಯಯನ' (1991) ಸಂಶೋಧನ ಪ್ರಬಂಧಗಳಾದರೆ, 'ಭುಲಾಯಿ ಹಾಡುಗಳು' ಅವರ ಸಂಪಾದನ ಕೃತಿಯಾಗಿದೆ. ಡಾ. ಟಿ.ಎಂ. ಭಾಸ್ಕರ ಅವರ ಸುಡಗಾಡಸಿದ್ದರು: ಒಂದು ಸಾಂಸ್ಕೃತಿಕ ಅಧ್ಯಯನ ಮತ್ತು 'ಮಹಾಗಾಂವದ ಮೀರಾಸಾಬ' ವ್ಯಕ್ತಿ ಚಿತ್ರಣ ಮತ್ತು ಕವಿಯ ಕಾವ್ಯ ಸಂಗ್ರಹವಾಗಿದೆ. ಡಾ. ಪಿ.ಕೆ. ಖಂಡೋಬಾ ಅವರು 'ಕರ್ನಾಟಕದ ಲಂಬಾಣಿಗಳ ಸಾಂಸ್ಕೃತಿಕ ಅಧ್ಯಯನ' ಜಾನಪದ ಕುರಿತ ಅನೇಕ ಮೌಲಿಕ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಇದರೊಂದಿಗೆ ಈ ನಾಡಿನಲ್ಲಿ ಅನೇಕ ಹಿರಿಯ–ಕಿರಿಯ ತಲೆಮಾರಿನ ಜಾನಪದ ಆಸಕ್ತರು ದುಡಿದಿರುವುದು ಸ್ಮರಣೀಯವಾಗಿದೆ.

ಈ ಪ್ರದೇಶದವರಲ್ಲದೆ ಇತರರಿಂದಲೂ ಪ್ರಾಸಂಗಿಕವಾಗಿ ಬೇರೆ ಭಾಗಗಳಲ್ಲಿ ಈ ಭಾಗದ ಜನಪದ ಕುರಿತು ಸಂಗ್ರಹಗಳು ಹೊರಬಂದಿವೆ. ಕ್ಯಾತನ ಹಳ್ಳಿ ರಾಮಣ್ಣ ಸಂಗ್ರಹಿಸಿ ಸಂಪಾದಿಸಿದ 'ಬೀದರ ಜಿಲ್ಲೆಯ ಜನಪದ ಕಥೆಗಳು' ಹಾಗೂ 'ಬೀದರ ಜಿಲ್ಲೆಯ ಜನಪದ ಹಾಡುಗಳು' ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಗೊಂಡಿವೆ. ಟಿ.ಎಸ್. ರಾಜಪ್ಪನವರ ಸಂಪಾದಕತ್ವದಲ್ಲಿ ಹೊರಬಂದ 'ರಾಯಚೂರು ಜಿಲ್ಲೆಯ ಜನಪದ ಹಾಡುಗಳು' ಮತ್ತು 'ರಾಯಚೂರು ಜಿಲ್ಲೆಯ ಜನಪದ ಕಥೆಗಳು' ಪ್ರಕಟವಾಗಿವೆ.

ಇಷ್ಟೆಲ್ಲ ಜಾನಪದ ಕುರಿತು ಪ್ರಯತ್ನಗಳು ನಡೆದರೂ ಬೆರಳೆಣಿಕೆಯಲ್ಲಿ ಕಾವ್ಯಗಳ ಸಂಗ್ರಹ ಕಂಡು ಬರುತ್ತವೆ. ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಈ ಕುರಿತು ನಡೆದ ಅಧ್ಯಯನಗಳಿಗೆ ಹೋಲಿಸಿದರೆ ಇಲ್ಲಿ ನಡೆದ ಕೆಲಸ ಕಡಿಮೆ ಎಂದೇ ಹೇಳಬಹುದು.

**ಖಇಈಇಖಇಓಅಇಖ**


1. ಬಳ್ಳಾರಿ ಜಿಲ್ಲೆಯ ಬಯಲಾಟಗಳು: ದುರ್ಗಾದಾಸ್ ಕೆ.ಆರ್., ಪು–116, 1996
2. Oinos, Felix J.: "Folk Epic", Folklore and Folklife: An: Introduction, Ed: Dorson, Richard M. 1972
3. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು: ಜಿ.ಶಂ.ಪ. ಪು–252, 1979
4. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು: ಜಿ.ಶಂ.ಪ. ಪು–309.
5. ಕವಿರಾಜ ಮಾರ್ಗ, ಪು–21
6. ಜನಪದ ಮಹಾಕಾವ್ಯಗಳು: ಅಂಬಳಿಕೆ ಹಿರಿಯಣ್ಣ ಪುಟ–1 ಕ.ವಿ.ಧಾ. 1998.
7. ಜನಪದ ಮಹಾಕಾವ್ಯಗಳು: ಅಂಬಳಿಕೆ ಹಿರಿಯಣ್ಣ ಪುಟ–1 ಕ.ವಿ.ಧಾ. 1998.
8. ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಗೀತೆಗಳು: ಕೇಶವ ಭಟ್ಟ,

ಪು–13, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–1996.

9. ಕರ್ನಾಟಕ ಜನಪದ ಮಹಾಕಾವ್ಯಗಳು ಸಂ. ತೀ. ನಂ. ಶಂಕರನಾರಾಯಣ ಪುಟ–12
10. Studies in Indian Folk Culture Ed. Shankar sen Gupta and K.D.Upadhyaya (introduction) P. iv-v.
11. ಜನಪದ ಮಹಾಕಾವ್ಯಗಳ ಅಧ್ಯಯನದ ಇತಿಹಾಸ ಪು–23, ಡಾ. ತೀ.ನಂ.ಶಂಕರನಾರಾಯಣ, ಕರ್ನಾಟಕ ಸಂಘ, ಪುತ್ತೂರು, ದ.ಕ. 1996.
12. ಜನಪದ ಮಹನಾಕಾವ್ಯಗಳು ಅಂಬಳಿಕೆ ಹಿರಿಯಣ್ಣ ಪು–14, ಕ.ವಿ.ವಿ., ಧಾರವಾಡ 1998.
13. ನಮ್ಮ ಜಾನಪದ ಸಮೀಕ್ಷೆ, ಸೋಮಶೇಖರ ಇಮ್ರಾಪುರ, ಚೇತನಾ ಪ್ರಕಾಶನ, ಧಾರವಾಡ 1979, ಪು–15.
14. Black burn Claus, Joyce and Susan 1989 Oral Epics in India P-7 University of California Press, Berkeley Los Angeles London.
15. ಕರ್ನಾಟಕ ಜನಪದ ಮಹಾಕಾವ್ಯಗಳು "ಜನಪದ ಮಹಾಕಾವ್ಯಗಳ ಸಮೀಕ್ಷೆ, ಡಾ. ವಾಮನ್ ನಂದಾವರ, ಸಂ. ಡಾ. ತೀ.ನಂ.ಶಂಕರನಾರಾಯಣ, ಪುಟ–18–19, ಕರ್ನಾಟಕ ಜಾನಪದ ಪದಯಕ್ಷಗಾನ ಅಕಾಡೆಮಿ ಬೆಂಗಳೂರು 1998.
16. 19ನೆ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ, ಐ.ಮಾ. ಮುತ್ತಣ್ಣ, ಪು–384, 1969.
17. ಹೊನ್ನಬಿತ್ತೇವು ಹೊಲಕೆಲ್ಲ: ಎಸ್. ಅನಂತ ನಾರಾಯಣ ಪು–514 (ತರಕೇರಿ)
18. ಮಧುರ ಚೆನ್ನರ ಸ್ಮೃತಿಗಳು, ಸಿಂಪಿ ಲಿಂಗಣ್ಣ, ಪು–10, 1961.
19. ಪರಿಷತ್ಪತ್ರಿಕೆ ವಿಮರ್ಶೆ ಭಾಗ–1, ಪು–61, 1925.
20. ವಿವರಗಳಿಗೆ:– ವಾಮನ ನಂದಾವರ 1995 'ಅವಳಿ ಆರಾಧನೆ–ಅವಳಿತನ–ಪುರಾಣ ಮತ್ತು ವಾಸ್ತವತೆ' ಸಿರಿ–ಅಮೃತ ಸೋಮೇಶ್ವರ ಅಭಿನಂದನ ಸಂಪುಟ, ಸಂ. ಡಾ. ಬಿಳಿಮಲೆ ಕಲಾಗಂಗೋತ್ರಿ, ಸೋಮೇಶ್ವರ, ವಿಟ್ಲ–574156 ಪು–179–197.